بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 33

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18 ಆಗಸ್ಟ್ 2022, 18 ಸಫರ್ 1401 ಹಿಜರಿ ಶಮ್ಸಿ,
19 ಮುಹರ್ರಮ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

رَبَّنَا لَا تَجْعَلْنَا فِتْنَةً لِّلَّذِيْنَ كَفَرُوْا
وَاغْفِرْ لَنَا رَبَّنَا ۚ
اِنَّكَ اَنْتَ الْعَزِيْزُ الْحَكِيْمُ ۝

**(ಅಲ್ ಮುಮ್‌ತಹಿನ : 06)**

**ಅಂದರೆ: 'ನಮ್ಮ ಪ್ರಭೂ, (ಸತ್ಯವನ್ನು) ನಿರಾಕರಿಸುವವರಿಗೆ ನೀನು ನಮ್ಮನ್ನು ಪರೀಕ್ಷಾ ಸಾಧನವನ್ನಾಗಿ ಮಾಡಬೇಡ. ನಮ್ಮನ್ನು ಕ್ಷಮಿಸಿಬಿಡು. ನಮ್ಮ ಪ್ರಭೂ, ನೀನು ಪ್ರತಾಪಶಾಲಿಯೂ ವಿವೇಕವಂತನೂ ಆಗಿರುವೆ.'**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ದಾವೂದ್(ಅ) ಸ್ವತಃ ತಮ್ಮ ಸಂಪಾದನೆಯಿಂದ ತಿನ್ನುತ್ತಿದ್ದರು

(2072) ಹಝ್ರತ್ ಮುಖದಮ್ (ಬಿನ್ ಮಾದಿ ಕರ್ಬ್)(ರ) ವರದಿ ಮಾಡುತ್ತಾರೆ ಅವರು ಹೇಳುತ್ತಾರೆ ಪ್ರವಾದಿ(ಸ) ಅವರು ಹೇಳಿದರು: ಮನುಷ್ಯ ತನ್ನ ಸ್ವಂತ ದುಡಿಮೆಯಿಂದ ಗಳಿಸುವ ಆಹಾರವನ್ನು ತಿನ್ನುವುದಕ್ಕಿಂತ ಉತ್ತಮವಾದ ಆಹಾರವಿಲ್ಲ ಮತ್ತು ಸರ್ವಶಕ್ತನಾದ ಅಲ್ಲಾಹನ ಪ್ರವಾದಿಯಾದ ಹಝ್ರತ್ ದಾವೂದ್ ಅಲೈಹಿಸ್ಸಲಾಮ್‌ರವರು ತಾವು ಗಳಿಸಿದ್ದನ್ನು ಮಾತ್ರ ತಿನ್ನುತ್ತಿದ್ದರು.

### ಸಂತೃಪ್ತಿಯಲ್ಲಿರುವವನೊಂದಿಗೆ ಮೃದುವಾಗಿ ವರ್ತಿಸುವುದುವುದು ಮತ್ತು ಬಡತನದಲ್ಲಿರುವವನಿಗೆ ಬಿಡುವು ನೀಡುವುದು

(2077) ಪ್ರವಾದಿ(ಸ) ಹೇಳಿದರು: ನಿಮ್ಮ ಹಿಂದೆ ಇದ್ದವರಲ್ಲಿ, ದೇವದೂತರು ಒಬ್ಬ ವ್ಯಕ್ತಿಯ ಆತ್ಮವನ್ನು ಸ್ವಾಗತಿಸಿದಾಗ, ಅವರು ಹೇಳಿದರು: ನೀವು ಏನಾದರೂ ಒಳ್ಳೆಯ ಕಾರ್ಯವನ್ನು ಮಾಡಿದ್ದೀರಾ? ಅದಕ್ಕೆ ಅವರು ಹೇಳಿದರು: ನಾನು ನನ್ನ ಯುವಕರಿಗೆ ಆರಾಮದಾಯಕ ಪರಿಸ್ಥಿತಿಯನ್ನು ಬಿಡಲು ಮತ್ತು ಬಡತನದಲ್ಲಿರುವವನಿಗೆ ಕ್ಷಮಿಸಲು ಆದೇಶಿಸುತ್ತಿದ್ದೆ (ಹಝ್ರತ್ ಹುಝೈಫ(ರ) ಹೇಳುತ್ತಿದ್ದರು ಪ್ರವಾದಿ(ಸ)ರವರು) ಹೇಳಿದರು: ದೇವದೂತರು ಸಹ ಅವರಿಗೆ ಕ್ಷಮಿಸಿದರು. ಮತ್ತೊಂದು ವರದಿಯ ಪ್ರಕಾರ, ಅವರು ಹೇಳಿದರು ನಾನು ಸಂತೃಪ್ತಿಯಲ್ಲಿರುವವನೊಂದಿಗೆ ಮೃದುವಾಗಿ ವರ್ತಿಸುವುದು ಮತ್ತು ಬಡತನದಲ್ಲಿರುವವನಿಗೆ ಬಿಡುವು ನೀಡುತ್ತಿದ್ದೆ.

(2078) ಪ್ರವಾದಿ(ಸ) ಹೇಳಿದರು: ಜನರಿಗೆ ಹಣವನ್ನು ಸಾಲವಾಗಿ ನೀಡುತ್ತಿದ್ದ ಒಬ್ಬ ವ್ಯಾಪಾರಿ ಇದ್ದನು. ಒಬ್ಬ ಬಡವನನ್ನು ಕಂಡಾಗ ಅವನು ತನ್ನ ಯುವಕರಿಗೆ ಹೇಳುತ್ತಿದ್ದನು: ಅವನನ್ನು ಕ್ಷಮಿಸಿರಿ, ಬಹುಶಃ ಅಲ್ಲಾಹನು ಸಹ ನಮ್ಮನ್ನು ಕ್ಷಮಿಸುತ್ತಾನೆ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವನನ್ನು ಕ್ಷಮಿಸಿದನು.

**(ಬುಖಾರಿ, ಸಂಪುಟ-4, ಕಿತಾಬ್ ಅಲ್-ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

## ಪವಿತ್ರ ಖುರ್‌ಆನ್‌ನ ಜ್ಞಾನಗಳ ಬಹಿರಂಗಪಡಿಸುವಿಕೆಗೆ (ಧರ್ಮನಿಷ್ಠೆ) ತಖ್ವ ಷರತ್ತಾಗಿದೆ ಲೌಕಿಕ ಮತ್ತು ಔಪಚಾರಿಕ ಜ್ಞಾನವನ್ನು ಪಡೆದುಕೊಳ್ಳಲು ತಖ್ವ ಷರತ್ತಲ್ಲ

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ವಾಸ್ತವವಾಗಿ, ಆತ್ಮದ ಸಾಂತ್ವನ, ತೃಪ್ತಿ ಮತ್ತು ಆತ್ಮದ ನಿಜವಾದ ಅಗತ್ಯಗಳನ್ನು ಪೂರೈಸುವಿಕೆಯು ಪವಿತ್ರ ಖುರ್‌ಆನ್‌ನಲ್ಲಿದೆ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು **ಹುದಲ್ಲಿಲ್ ಮುತ್ತಖೀನ್** "ಮುತ್ತಖೀಯರಿಗೆ ಮಾರ್ಗದರ್ಶನವಾಗಿದೆ" ಎಂದು ಹೇಳಿದ್ದಾನೆ ಮತ್ತು ಇನ್ನೊಂದು ಸ್ಥಳದಲ್ಲಿ **ಲಾ ಯಮುಸ್ಸುಹೂ ಇಲ್ಲಲ್ ಮುತಹ್ಹರೂನ್** (ಅಲ್‌ವಾಖಿಯ:80) "ಪರಿಶುದ್ಧನ ಹೊರತಾಗಿ ಅದನ್ನು ಯಾರು ಮುಟ್ಟಬಾರದು" ಎಂದು ಹೇಳಿದನು **ಮುತಹ್ಹರೂನ್** ಧರ್ಮನಿಷ್ಠರು ಯಾರು ಎಂದರೆ **ಹುದಲ್ಲಿಲ್‌ಮುತ್ತಖೀನ್** ನಲ್ಲಿ ವಿವರಿಸಲಾಗಿದೆ. ಇದರಿಂದ ಪವಿತ್ರ ಖುರ್‌ಆನ್ ಜ್ಞಾನಗಳ ಬಹಿರಂಗಪಡಿಸುವಿಕೆಗೆ ಧರ್ಮನಿಷ್ಠೆ ಒಂದು ಷರತ್ತು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಬಾಹ್ಯ ಜ್ಞಾನಗಳ ಸಂಪಾದನೆಗೂ ಖುರ್‌ಆನ್‌ನ ಜ್ಞಾನಗಳ ಸ್ವಾಧೀನಕ್ಕೂ ಬಹಳ ವ್ಯತ್ಯಾಸವಿದೆ. ಲೌಕಿಕ ಮತ್ತು ಔಪಚಾರಿಕ ಜ್ಞಾನವನ್ನು ಪಡೆದುಕೊಳ್ಳಲು ತಖ್ವ ಷರತ್ತಲ್ಲ. ಕೇವಲ ವ್ಯಾಕರಣ, ಭೌತಶಾಸ್ತ್ರ, ತತ್ವಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳ ಅಧ್ಯಯನಕ್ಕೆ ಆತನು ಸೌಮ್ ವ ಸಲಾತ್ (ಉಪವಾಸ ಹಾಗೂ ನಮಾಝ್) ಅನ್ನು ಅನುಸರಿಸುವುದು ಅವಶ್ಯಕವಲ್ಲ. ಮತ್ತು ಎಲ್ಲಾ ಸಮಯದಲ್ಲೂ ಅಲ್ಲಾಹನ ಆಜ್ಞೆಗಳು ಮತ್ತು ನಿಷೇಧಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಅವಶ್ಯಕವಲ್ಲ. ತಮ್ಮ ಪ್ರತಿಯೊಂದು ಕ್ರಿಯೆ ಮತ್ತು ಮಾತುಗಳನ್ನು ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳ ಅಡಿಯಲ್ಲಿ ಇರಿಸುವುದು ಅವಶ್ಯಕವಲ್ಲ, ಇದಕ್ಕೆ ವಿರುದ್ಧವಾಗಿ, ಕೆಲವೊಮ್ಮೆ ಸಾಮಾನ್ಯವಾಗಿ ಕಂಡುಬರುವ ಪ್ರಕಾರ, ಪ್ರಾಪಂಚಿಕ ವಿಜ್ಞಾನದ ತಜ್ಞರು ಮತ್ತು ವಿದ್ಯಾರ್ಥಿಗಳು ಎಲ್ಲಾ ರೀತಿಯ ದೌರ್ಬಲ್ಯ ಮತ್ತು ದುರ್ವರ್ತನೆಗಳಲ್ಲಿ ತೊಡಗುತ್ತಾರೆ. ಇಂದು, ಪ್ರಪಂಚದ ಮುಂದೆ ಒಂದು ದೊಡ್ಡ ಅನುಭವ ಯುರೋಪ್ ಮತ್ತು ಅಮೇರಿಕ ಇವೆ, ಆದರೂ ಅವರು ಭೂವಿಜ್ಞಾನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತಿದ್ದಾರೆ ಮತ್ತು ದಿನದಿಂದ ದಿನಕ್ಕೆ ಹೊಸ ಆವಿಷ್ಕಾರಗಳನ್ನು ಮಾಡುತ್ತಲೇ ಇದ್ದಾರೆ, ಆದರೆ ಅವರ ಆಧ್ಯಾತ್ಮಿಕ ಮತ್ತು ನೈತಿಕ ಸ್ಥಿತಿಯು ತುಂಬಾ ನಾಚಿಕೆಗೇಡಿನ ಸಂಗತಿಯಾಗಿದೆ. ಲಂಡನ್‌ನ ಉದ್ಯಾನವನಗಳು ಮತ್ತು ಪ್ಯಾರಿಸ್‌ನ ಹೋಟೆಲ್‌ಗಳ ಪರಿಸ್ಥಿತಿಗಳ ಬಗ್ಗೆ ಪ್ರಕಟವಾದದ್ದನ್ನು ನಾವು ಉಲ್ಲೇಖಿಸಲು ಸಾಧ್ಯವಿಲ್ಲ. ಆದರೆ ದೈವಿಕ ವಿಜ್ಞಾನಗಳು ಮತ್ತು ಪವಿತ್ರ ಖುರ್‌ಆನ್‌ನ ರಹಸ್ಯಗಳನ್ನು ತಿಳಿದುಕೊಳ್ಳಲು ಧರ್ಮನಿಷ್ಠೆ ಮೊದಲ ಷರತ್ತು ಆಗಿದೆ, ಇದರಲ್ಲಿ ಪಶ್ಚಾತ್ತಾಪದ ಅಗತ್ಯವಿದೆ, ಯಾವ ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳನ್ನು ಪೂರ್ಣ ವಿಧೇಯತೆ ಮತ್ತು ನಮ್ರತೆಯಿಂದ ಸ್ವೀಕರಿಸುವುದಿಲ್ಲವೋ ಮತ್ತು ಅವನ ಮಹಿಮೆ ಮತ್ತು ಶಕ್ತಿಗೆ ನಡುಗುವವರೆಗೆ ಪವಿತ್ರ ಖುರ್‌ಆನ್‌ನ ವಿಜ್ಞಾನದ ಬಾಗಿಲು ತೆರೆಯಲಾಗುವುದಿಲ್ಲ ಮತ್ತು ಆತ್ಮದ ಈ ಗುಣಗಳು ಮತ್ತು ಶಕ್ತಿಯನ್ನು ಪೋಷಿಸುವ ವಸ್ತುಗಳನ್ನು ಪವಿತ್ರ ಖುರ್‌ಆನ್‌ನಿಂದ ಕಂಡುಹಿಡಿಯಲಾಗುವುದಿಲ್ಲ, ಅದು ಆತ್ಮಕ್ಕೆ ಸಂತೋಷ ಮತ್ತು ಸಾಂತ್ವನವನ್ನು ನೀಡುತ್ತದೆ. ಪವಿತ್ರ ಖುರ್‌ಆನ್ ಅಲ್ಲಾಹನ ಗ್ರಂಥವಾಗಿದೆ ಮತ್ತು ಅದರ ಜ್ಞಾನ ಅಲ್ಲಾಹನ ಕೈಯಲ್ಲಿದೆ. ಆದ್ದರಿಂದ ಆತನಿಗೆ ಧರ್ಮನಿಷ್ಠೆಯು ದಾಳ ಹಿಡಿದಂತೆ ಇದೆ. ನಂಬಿಕೆಯಿಲ್ಲದ, ದುಷ್ಟ, ಐಹಿಕ ಆಸೆಗಳ ಬಂಧಿಗಳಿಗೆ ಕಿವುಡರಾಗಲು ಹೇಗೆ ಸಾಧ್ಯ? ಈ ಕಾರಣಕ್ಕಾಗಿ, ಓರ್ವ ಮುಸ್ಲಿಮ್, ತನ್ನನ್ನು ಮುಸ್ಲಿಮ್ ಎಂದು ಕರೆಸಿಕೊಂಡರೂ ವ್ಯಾಕರಣ, ವಾಕ್ಯರಚನೆ, ವಿಜ್ಞಾನಗಳ ಅರ್ಥ, ಮುಂತಾದವುಗಳಲ್ಲಿ ಒಬ್ಬ ವಿದ್ವಾಂಸನಾಗಿದ್ದರೂ ಸಹ, ಲೋಕದ ದೃಷ್ಟಿಯಲ್ಲಿ ಎಲ್ಲರಿಗಿಂತ ಹಿರಿಯ ವಿದ್ವಾಂಸನಾಗಿ ಕುಳಿತರೂ, ಆತ್ಮಶುದ್ಧಿ ಮಾಡದಿದ್ದರೆ, ಪವಿತ್ರ ಖುರ್‌ಆನ್‌ನ ಜ್ಞಾನ ನೀಡಲಾಗುವುದಿಲ್ಲ.

**(ಮಲ್‌ಫೂಝಾತ್, ಸಂಪುಟ-1, ಪುಟ-384, ಪ್ರಕಟಿತ ಖಾದಿಯಾನ್ 2018)**

### *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرُّ السُّمُوْمِ عَدَاوَۃُ الصُّلَحَاءِ

**ಪೀರ್ ಮೆಹರ್ ಅಲಿ ಶಾ ಅವರಿಗೆ ಮತ್ತೊಂದು ವೈಭವಯುತ ಬಹುಮಾನದ ಸವಾಲು, ಪ್ರತಿಸ್ಪರ್ಧಿಯಾಗಿ ತಫ್ಸೀರ್ ಬರೆದ ನಂತರ ನಿಮ್ಮ ತಫ್ಸೀರ್ ಶ್ರೇಷ್ಠವೆಂದು ಸಾಬೀತಾದರೆ ಮತ್ತು ನನ್ನ ತಫ್ಸೀರಿನಲ್ಲಿ ತಪ್ಪುಗಳನ್ನು ಕಂಡುಹಿಡಿದರೆ ಪ್ರತಿ ತಪ್ಪಿಗೆ ಐದು ರೂಪಾಯಿ ಬಹುಮಾನ ಕೊಡುವೆವು.**

ಇದಕ್ಕಿಂತ ಮುಂಚೆಯೆ ನಾವು ವಿವರಿಸಿದ್ದೆವು. ಸಯ್ಯಿದ್‌ನಾ ಹಝ್ರತ್ ಮಸೀಹ್(ಅ) ಪೀರ್ ಮೆಹರ್ ಶಾ ಗೋಲ್ಡವಿ ಅವರಿಗೆ ಅರಬಿಯಲ್ಲಿ ಸೂರಃ ಫಾತಿಹದ ತಫ್ಸೀರ್ ಬರೆಯಲು ಸವಾಲು ಹಾಕಿದ್ದೆವು ಮತ್ತು ಅದಕ್ಕಾಗಿ 70 ದಿನಗಳ ಗಡುವು ನೀಡಲಾಗಿತ್ತು. 70 ದಿನಗಳ ಒಳಗೆ ಅವರು ಇಜಾಝುಲ್ ಮಸೀಹ್" ಹೆಸರಿನಿಂದ ಸೂರಃ ಫಾತಿಹದ ತಫ್ಸೀರ್ ಪ್ರಕಟಿಸಿದರು. ಆದರೆ ಪೀರ್ ಮೆಹರ್ ಅಲಿ ಅವರಿಗೆ ಒಂದು ಸಾಲು ಸಹ ಬರೆಯುವ ಭಾಗ್ಯ ದೊರೆಯಲಿಲ್ಲ ಸುಮಾರು ಒಂದೂವರೆ ವರ್ಷದ ನಂತರ ಒಂದು ಪುಸ್ತಕ "ಸೈಫ್ ಚಿಶ್ತಿಯಾಯಿ" ಅವರಿಗೆ ಕಳುಹಿಸಿದರು. ಅದು ಉರ್ದುವಿನಲ್ಲಿತ್ತು. ಅದರಲ್ಲಿ ತಫ್ಸೀರಿನ ಹೆಸರೇ ಇರಲಿಲ್ಲ ಬದಲು ಆ ಪುಸ್ತಕ ಅರ್ಥವಿಲ್ಲದ ಟಿಪ್ಪಣಿಗಳಿಂದ ಮತ್ತು ಆರೋಪಗಳಿಂದ ಕೂಡಿತ್ತು. ಅವರು ತನ್ನ ಮೇರುಕೃತಿ "ನುಝುಲುಲ್ ಮಸೀಹ್" ನಲ್ಲಿ ಸವಿವರವಾಗಿ ಅದಕ್ಕೆ ಉತ್ತರ ನೀಡಿದರು. ಜೊತೆಯಲ್ಲಿ ತನ್ನ ತಫ್ಸೀರಿನಿಂದ ತಪ್ಪುಗಳನ್ನು ಕಂಡುಹಿಡಿದಾಗ ಪ್ರತಿಯೊಂದು ತಪ್ಪಿಗೆ ಐದು ರೂಪಾಯಿ ಬಹುಮಾನ ಕೊಡುವ ವಾಗ್ದಾನ ನೀಡಿದರು. ಆದರೆ ಒಂದು ಶರತ್ತು ವಿಧಿಸಿದರು. ತನ್ನ ತಫ್ಸೀರಿಗೆ ಎದುರಾಗಿ ಒಂದು ತಫ್ಸೀರ್ ಬರೆದು ತೋರಿಸಬೇಕು. ಈ ಬಹುಮಾನದ ಸವಾಲಿನ ವಿವರ ನಾವು ಹಿಂದಿನ ಎರಡು ಸಂಚಿಕೆಗಳಲ್ಲಿ ನೀಡಿರುತ್ತೇವೆ. ಆದರೆ ಸೈಫ್ ಚಿಶ್ತಿಯಾಯಿಯ ಸಂಬಂಧ ಅದೆ ಬಹುಮಾನದ ಸವಾಲಿಗೆ ಸಂಬಂಧಿಸಿತ್ತು. ಕಾರಣ ಸೈಫ್ ಚಿಶ್ತಿಯಾಯಿ ಕುರಿತು ಒಂದಿಷ್ಟು ವಿವರ ನೀಡುವುದು ಅನಿವಾರ್ಯವಾಯಿತು.

### ಸೈಫ್ ಚಿಶ್ತಿಯಾಯಿ ಮುಹಮ್ಮದ್ ಹಸನ್ ಭೇಂ ತಹನೀಲ್ ಚಕ್ವಲ್ ಜಿಲ್ಲಾ ಜಿಹಲುಂಯನ ಟಿಪ್ಪಣಿಗಳನ್ನು ಕದ್ದು ಬರೆಯಲಾಗಿತ್ತು.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನನಗೆ ಇಂದು 26 ಜುಲೈ 1902 ರಂದು ಬೇಸ್ ಗ್ರಾಮದಿಂದ ಮಿಯಾ ಶಹಾಬುದ್ದೀನ್‌ನ ಗೆಳೆಯ ಮೌಲ್ವಿ ಮುಹಮ್ಮದ್ ಹಸನ್ ಬೇಸ್‌ನ ಪತ್ರ ಸಿಕ್ಕಿತು. ಅದರಲ್ಲಿ ಅವರು ಬರೆದಿದ್ದರು. ನಾನು ಪೀರ್ ಮೆಹರ್ ಅಲಿ ಶಾ ಅವರ ಪುಸ್ತಕ ನೋಡುತ್ತಿದ್ದೆ. ಅಷ್ಟರಲ್ಲಿ ಒಬ್ಬ ಮನುಷ್ಯನು ನನಗೆ ಸಿಕ್ಕಿದ್ದನು. ಅವನ ಬಳಿ ಕೆಲವು ಪುಸ್ತಕಗಳಿದ್ದವು ಮತ್ತು ಅವನು ಮೌಲ್ವಿ ಮುಹಮ್ಮದ್ ಹಸನ್‌ನ ಮನೆಯ ವಿಳಾಸ ಕೇಳುತ್ತಿದ್ದನು. ಅವನು ಕೇಳಿದ ಮೇಲೆ ಹೇಳಿದನು ಮುಹಮ್ಮದ್ ಹುಸೇನರ ಪುಸ್ತಕಗಳು ಪೀರ್ ಸಾಹಿಬ್ ಕೇಳಿದ್ದರು ಅದನ್ನು ಈಗ ಮರಳಿ ಕೊಡಲು ಬಂದಿದ್ದೇನೆ. ನಾನು ಆ ಪುಸ್ತಕಗಳನ್ನು ನೋಡಿದೆ. ಅದರಲ್ಲಿ ಇಜಾಝುಲ್ ಮಸೀಹ್ ಇತ್ತು. ಅದರ ಮೇಲೆ ಮುಹಮ್ಮದ್ ಹಸನ್ ದಿವಂಗತರು ತನ್ನ ಕೈಯಿಂದ ಟಿಪ್ಪಣಿ ಬರೆದಿದ್ದರು. ಇನ್ನೊಂದು ಪುಸ್ತಕ ಶಮ್ಸ್ ಬಾಝಿಗ ಮತ್ತು ಅದರ ಮೇಲೆ ಸಹ ಮುಹಮ್ಮದ್ ಹಸನ್ ಟಿಪ್ಪಣಿ ಬರೆದಿದ್ದರು. ಕಾಕತಾಳಿಯದಂತೆ ಆಗ ಪುಸ್ತಕ ಸೈಫ್ ಶಿಶ್ತಿಯಾಯಿ ನನ್ನ ಬಳಿ ಮತ್ತು ನಾನು ಆ ಟಿಪ್ಪಣಿಗಳನ್ನು ಈ ಪುಸ್ತಕಕ್ಕೆ ಹೋಲಿಸಿ ನೋಡಿದೆ. ಆಗ ಕಂಡು ಬಂದಿದ್ದೇನೆಂದರೆ ಏನೆಲ್ಲ ಮುಹಮ್ಮದ್ ಹಸನ್ ಬರೆದಿದ್ದನೋ ಅಂತಹದ್ದೇ ವಿವರ ಯಾವ ಬದಲಾವಣೆಯಿಲ್ಲದೇ ಪೀರ್ ಮೆಹರ್ ಅಲಿ ಅದನ್ನು ಕದ್ದು ತನ್ನ ಪುಸ್ತಕದಲ್ಲಿ ನಕಲು ಹೊಡೆದಿದ್ದರು. ನಕಲಷ್ಟೇ ಅಲ್ಲ, ಅಕ್ಷರತಃ ನಕಲು ಮಾಡಿದ್ದರು. ಅದಲ್ಲದೇ ಮತ್ತೇನು ಇರಲಿಲ್ಲ. ನಾನು ಪ್ರತಿಯೊಂದು ನೋಡಬಯಸುವ ವ್ಯಕ್ತಿಗೆ ಮಹರ್ ಅಲಿ ಅವರ ಆ ಕೃತಿಚೌರ್ಯ ತೋರಿಸಬಹುದು. (ನುಝುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–443 ಟಿಪ್ಪಣಿ)

### ಕಳ್ಳತನ ಸಾಬೀತಾದ ಮೇಲೆ ಮಹರ್ ಅಲಿ ಅವರ ಉತ್ತರ ಮುಹಮ್ಮದ್ ಹಸನ್ ತನ್ನ ಹೆಸರಿನಿಂದ ನನಗೆ ಪ್ರಕಟಿಸಲು ಅನುಮತಿ ನೀಡಿದ್ದರು ಎಂದರು.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪೀರ್ ಮೆಹರ್ ಅಲಿ ಶಾ ಅವರ ಆ ಉತ್ತರಕ್ಕೆ ಪ್ರತಿಕ್ರಿಯೆ ನೀಡುತ್ತಾ ಹೇಳಿದರು. "ಈ ನೆವನೆಯು ಪಾಪಕ್ಕಿಂತ ಮರಣ ಪಾಪವಾಗಿದೆ. ಏಕೆಂದರೆ ಅವರಿಂದ ನಿಮಗೆ ಅನುಮತಿಯಿದ್ದರೆ ಅವನ ಮರಣದ ನಂತರ ಮೆಹರ್ ಅಲಿ ತನ್ನ ಕೃತಿ ಎಂದು ಏಕೆ ಪ್ರಟಿಸಿದ್ದಾರೆ. ಇದಂತೂ ಅನ್ಯಾಯದ ವಿಧಾನವಾಗಿದೆ. ಮೃತಪಟ್ಟ ವ್ಯಕ್ತಿಯೊಬ್ಬನ ಕೃತಿಯನ್ನು ತನ್ನ ಹೆಸರಿಗೆ ಬದಲಿಸಿಕೊಂಡರು. ಅವನ ಹೆಸರು ಸಹ ನಮೂದಿಸಲಿಲ್ಲ. ಪೀರ್ ಮೆಹರ್ ಶಾ ಸ್ಪಷ್ಟಗೊಳಿಸಬಹುದಿತ್ತು. ಇದು ನನ್ನ ರಚನೆಯಲ್ಲ ಬದಲು ಮುಹಮ್ಮದ್ ಹಸನರ ರಚನೆಯಾಗಿದೆ ಎಂದು. ನಾನು ಕೇವಲ ಕಳ್ಳ ಮಾತ್ರ. ಅದರ ಬದಲು ಸುಳ್ಳಿನ ಮಾರ್ಗ ಹಿಡಿದು ಬೇರೊಬ್ಬನ ರಚನೆ ತನ್ನ ಹೆಸರಿಗೆ ಬದಲಿಸಿಕೊಂಡದ್ದು ಸರಿಯಲ್ಲ (ಅದೇ ಪುಟ 446 ಟಿಪ್ಪಣಿ).

### ಅಲ್ಲಾಹನ ಮಾತು ಸತ್ಯವಾಗಲು ಪೀರ್ ಸಾಹಿಬರ ಈ ರೀತಿಯ ನಾಚಿಕೆಗೇಡು ಕಾರ್ಯ ಅನಿವಾರ್ಯವಿತ್ತು.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ ಅವರು ಕಳ್ಳತನದಂತಹ ಇಂತಹ ನಾಚಿಕೆಗೇಡು ಕಾರ್ಯ ಕೈಗೊಳ್ಳುವುದು ಅನಿವಾರ್ಯವಾಗಿತ್ತು. ಇಲ್ಲದಿದ್ದರೆ ಅಲ್ಲಾಹನು ಇಂದಿನಿಂದ ಹಲವು ವರ್ಷಗಳ ಹೇಳಿದ ಭವಿಷ್ಯವಾಣಿ ಪೂರ್ಣಗೊಳ್ಳುತ್ತಿರಲಿಲ್ಲ. ಆ ಭವಿಷ್ಯವಾಣಿ ಏನೆಂದರೆ, ಇನ್ನಿ ಮುಹೀನುಸ್. . . ಅಂದರೆ "ನಿನ್ನ ಅಪಮಾನ ಮಾಡಬಯಸುವವನ್ನು ನಾನು ಅಪಮಾನಿಸುವೆನು." ಆ ವ್ಯಕ್ತಿ ಸೈಫ್ ಚಿಶ್ತಿಯಾಯಿನಲ್ಲಿ ನನ್ನ ಮೇಲೆ ಕೃತಿಚೌರ್ಯದ ಆರೋಪ ಹೊರಿಸಿದ್ದನು. ನನ್ನ ಕೃತಿ ಇಜಾಝುಲ್ ಮಸೀಹ್‌ನಲ್ಲಿ ಸುಮಾರು ಇಪ್ಪತ್ತು ಸಾವಿರ ವಾಕ್ಯಗಳಲ್ಲಿ ಒಂದೆರಡು ವಾಕ್ಯಗಳು ಅರಬರ ಸುಪ್ರಸಿದ್ಧ ನುಡಿಗಟ್ಟುಗಳ ಉದಾಹರಣೆಗಳನ್ನು ದಿವ್ಯವಾಣಿಯ ಮೂಲಕ ಬಂದ ಕಾರಣ ಬರೆಯಲಾಗಿತ್ತು. ಅದನ್ನೇ ಎತ್ತಿಹಿಡಿದು ಕೃತಿಚೌರ್ಯದ ಆರೋಪ ಹಚ್ಚಿದ್ದರು. ಇದೀಗ ನೋಡಿ ಅವರ ಕರ್ಮಕಾಂಡ ಮುಹಮ್ಮದ್ ಹಸನ್ ಮೃತಪಟ್ಟ ವ್ಯಕ್ತಿಯೊಬ್ಬನ ಕೃತಿಯನ್ನು ತನ್ನ ಹೆಸರಿಗೆ ಬದಲಿಸಿಕೊಂಡದ್ದು ಸಾಬೀತಾಗಿದೆ. ಅವನ ಹೆಸರೂ ಸಹ ಎಲ್ಲೂ ಬರೆಯಲಿಲ್ಲ. ಈಗ ಹೇಳಿ ಇದು ಅಲ್ಲಾಹನ ದೃಷ್ಟಾಂತ ಹೌದೋ ಇಲ್ಲ, ಒಂದೆರಡು ವಾಕ್ಯಗಳನ್ನು ಕೃತಿ ಚೌರ್ಯದ ಆರೋಪ ಹಚ್ಚಿದವನು ತಾನೇ ಇಡೀ ಒಂದು ಪುಸ್ತಕವನ್ನೇ ಕದ್ದಿದ್ದು ಸಾಬೀತಾಯಿತು. ಕೇವಲ ಕಳ್ಳತನ ಮಾತ್ರವಲ್ಲ. ಬದಲು ಸುಳ್ಳು ಸಹ. ಒಂದು ಅಸಹ್ಯ ಸುಳ್ಳು ತನ್ನ ಕೃತಿ ಎಂದು ಬಣ್ಣಿಸಿ ಪ್ರಕಟಪಡಿಸಿದ್ದಾನೆ. (ಅದೇ ಪುಟ 448 ಟಿಪ್ಪಣಿ)

### ಮುಹಮ್ಮದ್ ಹಸನ್ ಭೇಸ್ ಸಾವಿಗೆ ಕಾರಣ ಮಸೀಹ್ ಮೌಉದ್(ಅ) ಅವರ ವಿರೋಧ ಮತ್ತು ಅವರ (ಅ ಮುಬಾಲ ಪ್ರಾರ್ಥನೆಯೇ ಕಾರಣ.

ಸಯ್ಯಿದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾನು ನನ್ನ ಗ್ರಂಥ ಇಜಾಝುಲ್ ಮಸೀಹರ ತಲೆಬರಹದಲ್ಲಿ ಈ ಭವಿಷ್ಯವಾಣಿ ಬರೆದಿದ್ದೆ. ಯಾವ ವ್ಯಕ್ತಿ ಈ ಪುಸ್ತಕದ ಉತ್ತರ ನೀಡಲು ಮನಸ್ಸು ಮಾಡುವನೋ ಅವನು ನಿರಾಶನಾಗುವನು. ಇದಕ್ಕಿಂತ ನಿರಾಶೆ ಬೇರೆನಿದೆ. ಏನಾಗುವುದು ಅವನು ತನ್ನ ಅರ್ಥಹೀನ ಪುಸ್ತಕ ಪ್ರಕಟಿಸಲು ಸಹ ಸಾಧ್ಯವಾಗಲಿಲ್ಲ. ಮತ್ತು ಇಹಲೋಕ ತ್ಯಜಿಸಿದನು. ಮತ್ತೊಂದು ದೃಷ್ಟಾಂತವೇನೆಂದರೆ, ಅದೇ ಗ್ರಂಥ ಈಝಾಝುಲ್ ಮಸೀಹನ ಪುಟ 199 ರಲ್ಲಿ ನಾನು ಈ ಪ್ರಾರ್ಥನೆಯನ್ನು ಮಾಡಿದ್ದೆ. ರಬ್ಬಿ ಅಂದರೆ ಓ ನನ್ನ ಪ್ರಭು! ನೀವು ನನ್ನ ಶತ್ರುಗಳು ಸತ್ಯವಂತರು, ನಿಷ್ಠಾವಂತರಿಗೆ ಮರಣ ನೀಡು, ಸುಳ್ಳುಗಾರರಿಗೆ ಮರಣ ನೀಡುವಂತೆ, ಇಲ್ಲ ನಾನು ನಿನ್ನವರು ಎಂದು ಭಾವಿಸಿದ್ದೆ ಆದರೆ ನನಗೆ ಶತ್ರುಗಳ ಮೇಲೆ ನೆರವು ನೀಡು. ಅಂದಹಾಗೆ ಸ್ಪಷ್ಟವಾಗಿದೆ. ಈ ಗ್ರಂತ ಇಜಾಝುಲ್ ಮಸೀಹ್ ಪ್ರಕಟವಾದ ಮೇಲೆ ಮುಹಮ್ಮದ್ ಹಸನ್ ಭೇಸ್ ನನ್ನನ್ನು ಎದುರಿಸಲು ಮೈದಾನಕ್ಕೆ ಬಂದನು. ಆದುದರಿಂದ ಈ ಮುಬಾಹಲ ಪ್ರಾರ್ಥನೆ ಅವನ ಸಾವಿಗೆ ಕಾರಣವೆನಿಸಿತು. (ಅದೇ ಉಟ 448 ಟಿಪ್ಪಣಿ)

ಮತ್ತೆ ಅವರು (ಅ) ನುಡಿದರು. "ಎರಡು ಗ್ರಂಥಗಳ ಇಜಾಝುಲ್ ಮಸೀಹ್ ಮತ್ತು ಶಮ್ಸ್ ಬಾಝಿಗ) ಮೇಲೆ ಟಿಪ್ಪಣಿ ಮಾಡಹೊರಟಾಗ ಅವನು ನನ್ನ ಗ್ರಂಥದ ಟಿಪ್ಪಣಿಯ ಕುರಿತು ಮುಬಾಹಲದ ಪ್ರಾರ್ಥನೆ ಬರೆದಿದ್ದನು. ಅಂದರೆ ನಮ್ಮಿಬ್ಬರಲ್ಲಿ ಯಾವ ವ್ಯಕ್ತಿ ಸುಳ್ಳುಗಾರನೋ ಅವನ ಮೇಲೆ ಅಲ್ಲಾಹನ ಶಾಪವಿರಲಿ, ತಕ್ಷಣ ಪ್ರಾರ್ಥನೆ ಸ್ವೀಕಾರವಾಯಿತು.

*(ಪುಟ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪವಿತ್ರ ಖುರ್‌ಆನ್, ಹರ್‍ಝ್ರತ್ ಪೈಗಂಬರ್(ಸ)ರ ಅನುಗ್ರಹೀತ ರೀತಿ ನಡೆವಳಿಕೆ ಮತ್ತು ಹದೀಸುಗಳ ಬೆಳಕಿನಲ್ಲಿ, ಹಿಂದೆ ಹೇಳಲಾದಂತೆ, ನುಬುವ್ವತ್ ವಾದವನ್ನು ಮಾಡಿದ್ದಕ್ಕೆ ಮಾತ್ರ ಅವರ ಮೇಲೆ ಹರ್‍ಝ್ರತ್ ಪೈಗಂಬರ್(ಸ) ಕಾರ್ಯಾಚರಣೆ ನಡೆಸಿರಲಿಲ್ಲ. ಸುಳ್ಳು ಪ್ರವಾದಿಗಳನ್ನು ಬೇರು ಸಹಿತ ಕಿತ್ತುಹಾಕಲು ಮಾತ್ರ ಹರ್‍ಝ್ರತ್ ಅಬೂಬಕರ್(ರ) ಈ ಯುದ್ಧ ಕಾರ್ಯಾಚರಣೆಗಳನ್ನು ಮಾಡಿರಲಿಲ್ಲ. ಬದಲಾಗಿ ಆ ಸುಳ್ಳುಪ್ರವಾದಿಗಳು ದಂಗೆಯೆದ್ದಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹರ್‍ಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್‍ಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–07–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಧರ್ಮತ್ಯಾಗಿಗಳ ವಿರುದ್ಧ ಮುಸ್ಲಿಮರು ನಡೆಸಿದ ಕಾರ್ಯಾಚರಣೆಗಳ ಪ್ರಸ್ತಾಪ ನಡೆಯುತ್ತಿದೆ. ಈ ಕುರಿತು ಹರ್‍ಝ್ರತ್ ಮುಹಾಜಿರ್(ರ) ಮತ್ತು ಹರ್‍ಝ್ರತ್ ಇಕ್ರಿಮ(ರ) ಕಿಂದ ಮತ್ತು ಹರ್‍ಝ್ರುರ್ ಮೌತಿನ ಪ್ರದೇಶದಲ್ಲಿ ಧರ್ಮತ್ಯಾಗಿಗಳ ವಿರುದ್ಧ ನಡೆಸಿದ ಕಾರ್ಯಾಚರಣೆಗಳ ಬಗ್ಗೆ ಹೆಚ್ಚಿನ ವಿವರಗಳು ಇವೆ. ಹರ್‍ಝ್ರತ್ ಮುಹಾಜಿರ್(ರ)ರಿಗೆ ಸನ್‌ಅದಲ್ಲಿ ಸ್ಥಿರತೆ ಲಭಿಸಿದಾಗ ಅವರು ಹರ್‍ಝ್ರತ್ ಅಬೂಬಕರ್(ರ)ರಿಗೆ ಪತ್ರದ ಮೂಲಕ ತನ್ನ ಎಲ್ಲ ಕಾರ್ಯಾಚರಣೆಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಅದಕ್ಕೆ ಜವಾಬು ಲಭಿಸಲು ಕಾಯುತ್ತಿದ್ದರು. ಅದೇ ವೇಳೆ ಮುಆಧ್ ಬಿನ್ ಜಬಲ್(ರ) ಮತ್ತು ಹರ್‍ಝ್ರತ್ ಪೈಗಂಬರ್(ಸ)ರ ಕಾಲದಿಂದಲೇ ಅಧಿಕಾರಿಯಾಗಿದ್ದ ಯಮನಿನ ಇತರರು ಮದೀನಕ್ಕೆ ಮರಳಿ ಬರಲು ಅನುಮತಿ ಕೇಳಿದರು. ಆಗ ಬೇಕಾದರೆ ಯಮನಿನಲ್ಲಿ ಇರಲು, ಇಲ್ಲದಿದ್ದರೆ ಮದೀನಕ್ಕೆ ಮರಳಿ ಬರಲು ಅಧಿಕಾರಿಗಳಿಗೆ ಹರ್‍ಝ್ರತ್ ಅಬೂಬಕರ್(ರ) ಹೇಳಿದರು. ಆದರೆ ತನ್ನ ಸ್ಥಾನದಲ್ಲಿ ಯಾರನ್ನಾದರೂ ನಿಶ್ಚಯಿಸಿ ಬರಲು ಹೇಳಿದರು. ತೀರ್ಮಾನ ಕೈಗೊಳ್ಳುವ ಅಧಿಕಾರ ಲಭಿಸಿದಾಗ ಎಲ್ಲರೂ ಮದೀನಕ್ಕೆ ಮರಳಿ ಬಂದರು. ಆದರೆ ಇಕ್ರಿಮ(ರ)ರ ಜೊತೆಗೆ ಸೇರಿಕೊಂಡು ಹರ್‍ಝ್ರುರ್ ಮೌತಿನಲ್ಲಿ ಝಿಯಾದ್ ಬಿನ್ ಲಬೀದಿಗೆ(ರ) ನೆರವು ನೀಡಲು ಹರ್‍ಝ್ರತ್ ಮುಹಾಜಿರ್(ರ)ರಿಗೆ ಆದೇಶ ಲಭಿಸಿತು. ಮಕ್ಕ ಮತ್ತು ಯಮನಿನ ನಡುವೆ ಯುದ್ಧ ಮಾಡುತ್ತಿದ್ದ ಸೈನಿಕರಿಗೆ ಮರಳಿ ಬರಲು ಅನುಮತಿ ಕೊಡಲು ಕೂಡ ಆದೇಶಿಸಲಾಯಿತು. ಎಂದರೆ, ಮರಳಿ ಬರಲು ಇಚ್ಛಿಸುವವರು ಮರಳಿ ಬರಲಿ. ನಾವು ಯುದ್ಧದಲ್ಲಿ ಭಾಗಿಯಾಗಲು ಬಯಸುತ್ತೇವೆ ಎಂದು ಹೇಳುವವರಿಗೆ ಹೊರತು ಇತರರಿಗೆ ಮರಳಿ ಹೋಗಲು ಅನುಮತಿ ಕೊಡಲು ಆಜ್ಞಾಪಿಸಲಾಯಿತು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ. ಅಲಿ ಮುಹಮ್ಮದ್ ಸಲಾಬಿ, ಪುಟ–305, ಅಲ್ ಫುರ್ಖಾನ್ ಟ್ರಷ್ಟ್ ಖಾನ್‌ಗಡ್)

ಹರ್‍ಝ್ರತ್ ಇಕ್ರಿಮರಿಗೆ(ರ) ಹರ್‍ಝ್ರತ್ ಅಬೂಬಕರ್(ರ)ರ ಪತ್ರ ಲಭಿಸಿತು. ಸನ್‌ಅದಿಂದ ಬರುತ್ತಿರುವ ಮುಹಾಜಿರ್ ಬಿನ್ ಅಬೂ ಉಮಯ್ಯರನ್ನು(ರ) ಭೇಟಿಯಾಗಲು ಮತ್ತು ಇಬ್ಬರೂ ಸೇರಿಕೊಂಡು ಕಿಂದ ಗೋತ್ರದ ಕಡೆಗೆ ಹೊರಡಲು ಅದರಲ್ಲಿ ಆಜ್ಞಾಪಿಸಲಾಗಿತ್ತು. ಈ ಪತ್ರ ಲಭಿಸಿದ ನಂತರ ಇಕ್ರಿಮ(ರ) ಮೆಹ್‌ರದಿಂದ ಹೊರಟರು. ಅಬೀನಿನಲ್ಲಿ ತಂಗಿಕೊಂಡು ಮುಹಾಜಿರ್ ಬಿನ್ ಅಬೂ ಉಮಯ್ಯರನ್ನು ಕಾಯಲು ಶುರುಮಾಡಿದರು. ಅಬೀನ ಕೂಡ ಯಮನಿನ ಒಂದು ಗ್ರಾಮವಾಗಿದೆ. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ. ಅಲಿ ಮುಹಮ್ಮದ್ ಸಲಾಬಿ, ಪುಟ–305, ಅಲ್ ಫುರ್ಖಾನ್ ಟ್ರಷ್ಟ್ ಖಾನ್‌ಗಡ್)

ಕಿಂದ ಗೋತ್ರದ ವಿರುದ್ಧ ನಡೆಸಲಾದ ಕಾರ್ಯಾಚರಣೆಗಳ ಕುರಿತು ತಾರೀಖ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಧರ್ಮತ್ಯಾಗಕ್ಕೆ ಮುಂಚೆ ಕಿಂದ ಮತ್ತು ಹರ್‍ಝ್ರುರ್ ಮೌತಿನ ಸಂಪೂರ್ಣ ಪ್ರದೇಶದವರು ಇಸ್ಲಾಂ ಸ್ವೀಕಾರ ಮಾಡಿದಾಗ ಅವರಿಂದ ಝುಕಾತ್ ವಸೂಲು ಮಾಡಲು ಹರ್‍ಝ್ರತ್ ಪೈಗಂಬರ್(ಸ) ಹೀಗೆ ನಿರ್ದೇಶನ ನೀಡಿದ್ದರು: ಹರ್‍ಝ್ರುರ್ ಮೌತಿನಲ್ಲಿ ಕೆಲವರ ಝುಕಾತನ್ನು ಕಿಂದದಲ್ಲಿ ಒಟ್ಟುಗೂಡಿಸಬೇಕು ಮತ್ತು ಕಿಂದದ ಕೆಲವರ ಝುಕಾತನ್ನು ಹರ್‍ಝ್ರುರ್ ಮೌತಿನಲ್ಲಿ ಒಟ್ಟುಸೇರಿಸಬೇಕು. ಎಂದರೆ ಅದನ್ನು ಅಲ್ಲಿಗೆ ಕಳುಹಿಸಬೇಕು. ಆಗ ಕಿಂದದ ಕೆಲವು ಜನರು ಹೇಳಿದರು: ಯಾ ರಸೂಲಲ್ಲಾಹ್, ನಮ್ಮ ಬಳಿ ಒಂಟೆಗಳಿಲ್ಲ. ಆದ್ದರಿಂದ ಅಲ್ಲಿನ ಜನರು ಸವಾರಿಮೃಗಗಳ ಮೇಲೆ ನಮ್ಮ ಬಳಿಗೆ ಝುಕಾತಿನ ಸಂಪತ್ತನ್ನು ತಲುಪಿಸಿದರೆ ಉತ್ತಮ. ಹರ್‍ಝ್ರತ್ ಪೈಗಂಬರ್(ಸ) ಹರ್‍ಝ್ರುರ್ ಮೌತಿನ ಜನರೊಡನೆ ಹೇಳಿದರು: ನಿಮಗೆ ಹಾಗೆ ಮಾಡಲು ಸಾಧ್ಯವಿದ್ದರೆ ಹಾಗೆ ಮಾಡಿರಿ. ಅವರು ಹೇಳಿದರು: ಅವರ ಬಳಿ ಸವಾರಿಮೃಗಗಳು ಇಲ್ಲವೆಂದಾದರೆ, ನಾವು ಹಾಗೆ ಮಾಡುವೆವು. ಅನಂತರ ಹರ್‍ಝ್ರತ್ ಪೈಗಂಬರ್(ಸ) ನಿಧನರಾದ ನಂತರ ಝುಕಾತ್ ವಸೂಲು ಮಾಡುವ ಸಮಯವಾದಾಗ, ಝಿಯಾದ್ ಜನರನ್ನು ತನ್ನ ಬಳಿಗೆ ಕರೆದರು. ಅವರು ಝಿಯಾದಿನ ಬಳಿಗೆ ಬಂದರು. ಕಿಂದಾ ನಿವಾಸಿಗಳು ಹೇಳಿದರು: ಹರ್‍ಝ್ರತ್ ಪೈಗಂಬರ್(ಸ) ವಾಗ್ದಾನ ಮಾಡಿದಂತೆ ಝುಕಾತಿನ ಸಂಪತ್ತನ್ನು ನಮ್ಮ ಬಳಿಗೆ ತಲುಪಿಸಿರಿ. ಅವರು ಹೇಳಿದರು: ನಿಮ್ಮ ಬಳಿ ಭಾರ ಎತ್ತುವ ಜಾನುವಾರುಗಳಿವೆ. ನಿಮ್ಮ ಜಾನುವಾರುಗಳನ್ನು ಕೊಂಡು ಬನ್ನಿರಿ ಮತ್ತು ಝುಕಾತಿನ ಸಂಪತ್ತನ್ನು ಕೊಂಡುಹೋಗಿರಿ. ಸ್ವತಃ ಝುಕಾತಿನ ಸಂಪತ್ತು ತಲುಪಿಸುವುದನ್ನು ಝಿಯಾದ್ ನಿರಾಕರಿಸಿದರು. ಕಿಂದಾದ ಜನರು ತಮ್ಮ ಬೇಡಿಕೆಯಲ್ಲಿ ಪಟ್ಟುಹಿಡಿದರು. ಅನಂತರ ಜನರು ತಮ್ಮ ಮನೆಗಳಿಗೆ ಮರಳಿ ಹೋದರು. ಅವರ ವರ್ತನೆಯ ರೀತಿ ಬದಲಾಯಿತು. ಒಂದು ಹೆಜ್ಜೆ ಮುಂದಕ್ಕೆ ಇಟ್ಟರೆ, ಮತ್ತೊಂದು ಹೆಜ್ಜೆ ಹಿಂದೆ ಇರಿಸುತ್ತಿದ್ದರು. ಹರ್‍ಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ(ರ) ಅಲ್ಲಿಗೆ ಬರುವ ವರೆಗೂ ಕಿಂದ ಗೋತ್ರದ ಧರ್ಮತ್ಯಾಗಿಗಳ ಮತ್ತು ಝುಕಾತ್ ನೀಡುವುದನ್ನು ನಿರಾಕರಿಸಿದವರ ವಿರುದ್ಧ ಯಾವುದೇ ಕಾರ್ಯಾಚರಣೆ ನಡೆಸುವುದರಿಂದ ಹರ್‍ಝ್ರತ್ ಝಿಯಾದ್ ಬಿನ್ ಲಬೀದ್(ರ) ತಡೆದು ನಿಂತರು. ನೀವಿಬ್ಬರೂ ಹರ್‍ಝ್ರುರ್ ಮೌತಿಗೆ ಹೋಗಿ ಝಿಯಾದಿನ ಹೊಣೆಗಾರಿಕೆಗೆ ನೆರವಾಗಿರಿ ಎಂದು ಮುಹಾಜಿರ್ ಮತ್ತು ಹರ್‍ಝ್ರತ್ ಇಕ್ರಿಮರಿಗೆ ಹರ್‍ಝ್ರತ್ ಅಬೂಬಕರ್ ಪತ್ರ ಬರೆದರು. ಮಕ್ಕದಿಂದ ಯಮನಿನ ನಡುವೆ ಇರುವ ಪ್ರದೇಶದವರಲ್ಲಿ ನಿಮ್ಮ ಜೊತೆಗೆ ಇರುವವರಿಗೆ ಮರಳಿ ಹೋಗಲು ಅನುಮತಿ ಕೊಡಿರಿ ಎಂದು ಆಜ್ಞಾಪಿಸಿದರು. ಸ್ವತಃ ಸಂತೋಷದಿಂದ ಜಿಹಾದಿನಲ್ಲಿ ಭಾಗಿಯಾಗಲು ಬಯಸುವವರನ್ನು ಹೊರತುಪಡಿಸಿ. ಹೀಗೆ ಹರ್‍ಝ್ರತ್ ಮುಹಾಜಿರ್(ರ) ಆಜ್ಞೆಯನ್ನು ಪಾಲಿಸಿದರು. ಹರ್‍ಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ(ರ) ಸನ್‌ಅದಿಂದ ಮತ್ತು ಹರ್‍ಝ್ರತ್ ಇಕ್ರಿಮ(ರ) ಅಬೀನ್‌ನಿಂದ ಹರ್‍ಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಹರ್‍ಝ್ರುರ್ ಮೌತಿನ ಕಡೆಗೆ ಹೊರಟರು ಮತ್ತು ಮಆರಿಬ್ ಎಂಬ ಸ್ಥಳದಲ್ಲಿ ಇಬ್ಬರೂ ಭೇಟಿಯಾದರು.

ಕಿಂದದ ಒಬ್ಬ ಯುವಕ ತಪ್ಪಾಗಿ ತನ್ನ ಸಹೋದರನ ಒಂಟೆಯನ್ನು ಝುಕಾತಿಗಾಗಿ ಕೊಟ್ಟಿದ್ದ. ಹರ್‍ಝ್ರತ್ ಝಿಯಾದ್(ರ) ಅದನ್ನು ಬೆಂಕಿಯ ಕೆಂಡದಿಂದ ಝುಕಾತಿನ ಗುರುತು ಹಾಕಿದರು. ಅದು ತಪ್ಪಾಗಿ ಕೊಡಲಾಗಿತ್ತು ಎಂದು ಹೇಳಿ ಸ್ವಲ್ಪ ಸಮಯದ ನಂತರ ಆ ಯುವಕ ಆ ಒಂಟೆಯನ್ನು ಮರಳಿ ಕೊಡಲು ಬೇಡಿದನು. ಅವನು ನೆಪವನ್ನು ಮಾಡುತ್ತಿದ್ದಾನೆ ಎಂದು ಭಾವಿಸಿ ಝಿಯಾದ್(ರ) ಅದಕ್ಕೆ ಒಪ್ಪಲಿಲ್ಲ. ಯುವಕನು ತನ್ನ ಗೋತ್ರದವರನ್ನು ಮತ್ತು ಅಬೂಸಮೀದ್‌ನನ್ನು, ಎಂದರೆ ಒಂಟೆ ನೀಡಿದವನನ್ನು ಸಹಾಯಕ್ಕಾಗಿ ಕರೆದನು. ಹರ್‍ಝ್ರತ್ ಝಿಯಾದ್‌ರೊಡನೆ ಒಂಟೆಯನ್ನು ಅಬೂಸಮೀದ್ ಬದಲಾಯಿಸಲು ಬೇಡಿದರು. ಆದರೆ ಹರ್‍ಝ್ರತ್ ಝಿಯಾದ್(ರ) ತನ್ನ ನಿಲುವಿನಲ್ಲಿ ಪಟ್ಟು ಹಿಡಿದರು.

ಅಬೂಸಮೀದ್‌ನಿಗೆ ಕೋಪಬಂತು. ಅಬೂ ಸಮೀತ್ ಮತ್ತು ಅವನ ಜೊತೆಗಾರರು ಬಲವಂತವಾಗಿ ಒಂಟೆಯ ಕಟ್ಟನ್ನು ಬಿಚ್ಚಿದರು. ಅಬೂಸಮೀತ್ ಮತ್ತು ಅವನ ಜೊತೆಗಾರರನ್ನು ಬಂಧಿಸಲಾಯಿತು ಮತ್ತು ಒಂಟೆಯನ್ನು ಕೂಡ ವಶಪಡಿಸಿಕೊಳ್ಳಲಾಯಿತು. ಆ ಜನರು ಇತರ ಗೋತ್ರಗಳ ಜನರನ್ನು ಕೂಡ ಸಹಾಯಕ್ಕಾಗಿ ಕರೆದರು. ಹೀಗೆ ಬನೂ ಮುಆವಿಯ ಗೋತ್ರ ಅಬೂಸಮೀದಿನ ಸಹಾಯಕ್ಕಾಗಿ ಬಂದರು. ಬನೂ ಮುಆವಿಯ ಗೋತ್ರವು ಕಿಂದ ಗೋತ್ರದ ಶಾಖೆಯಾಗಿದೆ. ತನ್ನ ಸಂಗಡಿಗರನ್ನು ಬಿಡುಗಡೆಗೊಳಿಸಲು ಅವರು ಹಝ್ರತ್ ಝಿಯಾದ್‌ನೊಡನೆ ಬೇಡಿದರು. ಆದರೆ ಅವರು ಹೊರಟು ಹೋಗುವ ತನಕ ಬಂಧಿಗಳನ್ನು ಬಿಡುಗಡೆಗೊಳಿಸುವುದನ್ನು ಹಝ್ರತ್ ಝಿಯಾದ್(ರ) ನಿರಾಕರಿಸಿದರು. ನೀವು ಹೋಗಿರಿ, ಅನಂತರ ನಾನು ನೋಡುತ್ತೇನೆ ಎಂದು ಹೇಳಿದರು. ಆದರೆ ಅವರು ಹೊರಟು ಹೋಗದಿದ್ದಾಗ ಹಝ್ರತ್ ಝಿಯಾದ್(ರ) ದಾಳಿ ನಡೆಸಿ ಅವರ ಅನೇಕ ಜನರನ್ನು ವಧಿಸಿದರು. ಆದರೆ ಕೆಲವರು ಪರಾರಿಯಾದರು. ಹಝ್ರತ್ ಝಿಯಾದ್(ರ) ಅವರ ಕೈದಿಗಳನ್ನು ಕೂಡ ಸ್ವತಂತ್ರಗೊಳಿಸಿದರು. ಆದರೆ ಅವರು ಮರಳಿ ಹೋಗಿ ಯುದ್ಧದ ತಯಾರಿಯನ್ನು ಶುರುಮಾಡಿದರು. ಹೀಗೆ ಬನೂ ಅಮ್ರ್, ಬನೂ ಹಾರಿಸ್, ಅಶ್‌ಅಸ್ ಬಿನ್ ಖೈಸ್ ಮತ್ತು ಸಮತ್ ಬಿನ್ ಅಸ್ವದ್ ಎಲ್ಲರೂ ತಮ್ಮ ತಮ್ಮ ಸೇನಾತಾಣಗಳಿಗೆ ಹೊರಟರು ಮತ್ತು ಝುಕಾತ್ ನೀಡುವುದನ್ನು ನಿರಾಕರಿಸಿದರು ಹಾಗೂ ಧರ್ಮತ್ಯಾಗ ಮಾಡಿದರು. ಆಗ ಹಝ್ರತ್ ಝಿಯಾದ್(ರ) ಬನೂ ಅಮ್ರ್ ಗೋತ್ರದ ಮೇಲೆ ದಾಳಿ ನಡೆಸಿದರು. ಅವರ ಅನೇಕ ಜನರನ್ನು ವಧಿಸಿದರು ಮತ್ತು ಪರಾರಿಯಾಗಲು ಸಾಧ್ಯವಿದ್ದವರು ಪರಾರಿಯಾದರು. ಅನೇಕರನ್ನು ಬಂಧಿಸಿ ಮದೀನಕ್ಕೆ ಕಳುಹಿಸಿದರು. ಮಾರ್ಗದಲ್ಲಿ ಅಶ್‌ಅಸ್ ಮತ್ತು ಬನೂ ಹಾರಿಸ್‌ನ ಜನರು ದಾಳಿ ನಡೆಸಿ ಮುಸ್ಲಿಮರಿಂದ ತನ್ನ ಬಂಧಿಗಳನ್ನು ಬಿಡುಗಡೆಗೊಳಿಸಿದರು. ಈ ಘಟನೆಯ ನಂತರ ಆಸುಪಾಸಿನ ಅನೇಕ ಗೋತ್ರಗಳು ಕೂಡ ಆ ಜನರೊಂದಿಗೆ ಸೇರಿಕೊಂಡರು ಮತ್ತು ಅವರು ಕೂಡ ಧರ್ಮತ್ಯಾಗ ಮಾಡಿದ್ದಾಗಿ ಘೋಷಿಸಿದರು. ಆಗ ಹಝ್ರತ್ ಝಿಯಾದ್(ರ) ಸಹಾಯಕ್ಕಾಗಿ ಹಝ್ರತ್ ಮುಹಾಜಿರ್‌ರಿಗೆ ಪತ್ರ ಬರೆದರು. ಹಝ್ರತ್ ಮುಹಾಜಿರ್(ರ) ಹಝ್ರತ್ ಇಕ್ರಿಮರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಸ್ವತಃ ತನ್ನ ಸಂಗಡಿಗರನ್ನು ಸೇರಿಸಿ ಕಿಂದದ ಮೇಲೆ ದಾಳಿ ನಡೆಸಿದರು. ಕಿಂದದ ಜನರು ಓಡಿಹೋಗಿ ಹಝ್ರ್‌ಮೌತಿನ ಸಮೀಪವಿರುವ ನಜೀರ್ ಎಂಬ ಹೆಸರಿನ ಒಂದು ಕೋಟೆಯಲ್ಲಿ ಅಡಗಿಗೊಂಡರು. ಈ ಕೋಟೆಗೆ ಮೂರು ಮಾರ್ಗಗಳಿವೆ. ಒಂದು ಮಾರ್ಗದಲ್ಲಿ ಹಝ್ರತ್ ಝಿಯಾದ್(ರ) ಹೋದರು, ಎರಡನೆಯ ಮಾರ್ಗದಲ್ಲಿ ಹಝ್ರತ್ ಮುಹಾಜಿರ್(ರ) ಡೇರೆ ಹಾಕಿದರು. ಮೂರನೆಯ ಮಾರ್ಗವು ಕಿಂದದವರ ಅಧೀನದಲ್ಲೇ ಇತ್ತು. ಕೊನೆಗೆ ಹಝ್ರತ್ ಇಕ್ರಿಮ(ರ) ತಲುಪಿದರು ಮತ್ತು ಆ ಮಾರ್ಗವನ್ನು ವಶಪಡಿಸಿಕೊಂಡರು. ಹಝ್ರತ್ ಝಿಯಾದ್(ರ), ಹಝ್ರತ್ ಮುಹಾಜಿರ್(ರ) ಮತ್ತು ಹಝ್ರತ್ ಇಕ್ರಿಮ(ರ)ರ ಸೈನ್ಯ ಐದು ಸಾವಿರ ಮುಹಾಜಿರ್, ಅನ್ಸಾರ್ ಸಹಾಬಿಯರು ಮತ್ತು ಇತರ ಗೋತ್ರದವರನ್ನು ಒಳಗೊಂಡಿತ್ತು. ಮುಸ್ಲಿಮರಿಗೆ ನಿರಂತರವಾಗಿ ಸಹಾಯ ಲಭಿಸುತ್ತಿರುವುದನ್ನು ಕಂಡಾಗ ಕಿಂದದವರು ಭಯಗೊಂಡರು. ಆದ್ದರಿಂದ ಅವರ ಸರದಾರನಾದ ಅಶ್‌ಅಸ್ ಬೇಗನೇ ಹಝ್ರತ್ ಇಕ್ರಿಮರ ಬಳಿಗೆ ಹೋಗಿ ಅಭಯ ಕೇಳಿದರು. ಹಝ್ರತ್ ಇಕ್ರಿಮ(ರ) ಅಶ್‌ಅಸ್‌ನ ಜೊತೆಗೆ ಹಝ್ರತ್ ಮುಹಾಜಿರರ(ರ) ಬಳಿಗೆ ಹೋದರು. ತನ್ನ ಮತ್ತು ತನ್ನ 9 ಜೊತೆಗಾರರಿಗೆ ಅಭಯ ನೀಡಬೇಕೆಂಬ ನಿಬಂಧನೆಯೊಂದಿಗೆ ಅಶ್‌ಅಸ್ ಕೋಟೆಯ ಬಾಗಿಲನ್ನು ತೆರೆಯುವುದಾಗಿ ಹೇಳಿದನು. ಹಝ್ರತ್ ಮುಹಾಜಿರ್(ರ) ಈ ಶರತ್ತನ್ನು ಒಪ್ಪಿಕೊಂಡರು. ಅಶ್‌ಅಸ್ 9 ವ್ಯಕ್ತಿಗಳ ಹೆಸರುಗಳನ್ನು ಬರೆದಾಗ ಅವಸರದಲ್ಲಿ ಮತ್ತು ಗಾಬರಿಯಿಂದ ತನ್ನ ಹೆಸರನ್ನು ಬರೆಯಲು ಮರೆತುಹೋದನು. ಅನಂತರ ಹಝ್ರತ್ ಮುಹಾಜಿರರ(ರ) ಬಳಿಗೆ ಈ ಲಿಖಿತವನ್ನು ತೆಗೆದುಕೊಂಡು ಹೋದನು. ಆಗ ಅವರು ಅದರ ಮೇಲೆ ಮೊಹರು ಹಾಕಿದರು. ಅನಂತರ ಅಶ್‌ಅಸ್ ಮರಳಿ ಹೋದನು. ಆತನು ಕೋಟೆಯ ಬಾಗಿಲನ್ನು ತೆರೆದಾಗ ಮುಸ್ಲಿಮರು ಅದರೊಳಗೆ ಪ್ರವೇಶಿಸಿದರು. ಇರುಪಕ್ಷದವರ ಯುದ್ಧದಲ್ಲಿ ಏಳುನೂರು ಕಿಂದದವರು ವಧಿಸಲ್ಪಟ್ಟರು. ಕೋಟೆಯವರು ಕೂಡ ಹೋರಾಡಿದರು. ಹೇಗಿದ್ದರೂ ಅವರನ್ನು ವಧಿಸಲಾಯಿತು. ಒಂದು ಸಾವಿರ ಮಹಿಳೆಯನ್ನು ಬಂಧಿಸಲಾಯಿತು. ಘೋರವಾದ ಯುದ್ಧ ನಡೆದ ನಂತರ ಮುಸ್ಲಿಮರಿಗೆ ವಿಜಯ ಲಭಿಸಿತು. ಅನಂತರ ಹಝ್ರತ್ ಮುಹಾಜಿರ್(ರ) ಅಭಯಪತ್ರವನ್ನು ಪಡೆದು ಅದರಲ್ಲಿ ಬರೆಯಲಾದ ಎಲ್ಲರನ್ನು ಕ್ಷಮಿಸಿದರು. ಆದರೆ ಅದರಲ್ಲಿ ಅಶ್‌ಅಸಿನ ಹೆಸರು ಇರಲಿಲ್ಲ. ಆಗ ಅವನನ್ನು ಕೊಲ್ಲಲು ಹಝ್ರತ್ ಮುಹಾಜಿರ್(ರ) ಉದ್ದೇಶಿಸಿದರು. ಆದರೆ ಹಝ್ರತ್ ಇಕ್ರಿಮ(ರ) ವಿನಂತಿಸಿದಾಗ ಆತನನ್ನು ಇತರ ಬಂಧಿಗಳೊಂದಿಗೆ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಕಳುಹಿಸಲಾಯಿತು. ವಿಜಯದ ಸುದ್ದಿ ಮತ್ತು ಬಂಧಿಗಳೊಂದಿಗೆ ಹಝ್ರತ್ ಇಕ್ರಿಮ(ರ) ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಅಬೂಬಕರ್(ರ) ಕೇಳಿದರು: ನಿನ್ನ ಜೊತೆಗೆ ಹೇಗೆ ವರ್ತಿಸಬೇಕು? ಅಶ್‌ಅಸ್ ಹೇಳಿದನು: ನನಗೆ ನಿಮ್ಮ ಅಭಿಪ್ರಾಯದ ಬಗ್ಗೆ ಗೊತ್ತಿಲ್ಲ. ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಅಭಿಪ್ರಾಯದಲ್ಲಿ ನಿನ್ನನ್ನು ಕೊಲ್ಲಬೇಕು. ಅವನು ಹೇಳಿದನು: ನಾನು ನನ್ನ ಕೋಮಿನ 10 ಜನರ ಜೀವ ಉಳಿಸಲು ವಿನಂತಿ ಮಾಡಿದವನಾಗಿದ್ದೇನೆ. ನನ್ನನ್ನು ಹೇಗೆ ಕೊಲ್ಲುವುದು. ಹಝ್ರತ್ ಅಬೂಬಕರ್(ರ) ಕೇಳಿದರು: ಮುಸ್ಲಿಮರು ಆ ಕಾರ್ಯವನ್ನು ನಿನಗೆ ಒಪ್ಪಿಸಿದ್ದರೆ? ಹೌದೆಂದು ಅವನು ಹೇಳಿದನು. ಹಝ್ರತ್ ಅಬೂಬಕರ್(ರ) ಕೇಳಿದರು: ಮುಸ್ಲಿಮರು ನಿನಗೆ ಕಾರ್ಯವನ್ನು ಒಪ್ಪಿಸಿ, ನೀನು ಅವರ ಬಳಿಗೆ ಹೋದಾಗ ಅವರು ಅದರ ಮೇಲೆ ಮೊಹರು ಹಾಕಿದ್ದರೇ? ಹೌದೆಂದು ಅವನು ಹೇಳಿದನು. ಹಝ್ರತ್ ಅಬೂಬಕರ್(ರ) ಕೇಳಿದರು: ಮೊಹರು ಹಾಕಿದ ನಂತರ ಅದರಲ್ಲಿ ಬರೆಯಲಾದಂತೆ ಸಂಧಾನವಾಗಿತ್ತೇ? ಅಶ್‌ಅಸ್ ಭಯಗೊಂಡು ಹೇಳಿದನು: ನೀವು ನನ್ನಿಂದ ಏನಾದರೂ ಒಳಿತನ್ನು ಬಯಸುವಿರಾದರೆ, ಬಂಧಿಗಳನ್ನು ಸ್ವತಂತ್ರಗೊಳಿಸಿರಿ ಮತ್ತು ನನ್ನ ತಪ್ಪುಗಳನ್ನು ಕ್ಷಮಿಸಿರಿ. ನನ್ನ ಇಸ್ಲಾಮನ್ನು ಸ್ವೀಕಾರ ಮಾಡಿರಿ ಮತ್ತು ನನ್ನಂತಹ ವ್ಯಕ್ತಿಗಳೊಡನೆ ನೀವು ವರ್ತಿಸುವ ರೀತಿಯಲ್ಲೇ ನನ್ನೊಡನೆ ವರ್ತಿಸಿರಿ. ನನ್ನ ಪತ್ನಿಯನ್ನು ನನಗೆ ಮರಳಿಕೊಡಿರಿ. ಅಲ್ಲಾಹನ ದೀನಿಗಾಗಿ ಇರುವ ಜನರಲ್ಲಿ ನಾನು ನನ್ನ ಪ್ರದೇಶದಲ್ಲೇ ಅತ್ಯುತ್ತಮನಾಗಿ ನೀವು ನನ್ನನ್ನು ಕಾಣುವಿರಿ. ಆಗ ಹಝ್ರತ್ ಅಬೂಬಕರ್(ರ) ಅವನಿಗೆ ಜೀವದಾನ ನೀಡಿದರು. ಅವನ ಇಸ್ಲಾಮನ್ನು ಸ್ವೀಕಾರ ಮಾಡಿದರು. ಅವನ ಪತ್ನಿಯನ್ನು ಅವನಿಗೆ ಒಪ್ಪಿಸಿದರು. ಹೋಗು, ನಿನ್ನ ಕುರಿತು ನನಗೆ ಒಳ್ಳೆಯ ಸುದ್ದಿಗಳು ತಲುಪಲಿ ಎಂದು ಅವನೊಡನೆ ಹೇಳಿದರು.

ಹೀಗೆ ಹಝ್ರತ್ ಅಬೂಬಕರ್(ರ) ಸಕಲ ಬಂಧಿಗಳನ್ನು ಸ್ವತಂತ್ರಗೊಳಿಸಿದರು. ಅವರೆಲ್ಲರೂ ತಮ್ಮ ತಮ್ಮ ಸ್ವದೇಶಗಳಿಗೆ ಹೋದರು. (ಅತ್ತಾರೀಖ್ ಅತ್ತಬರಿ, ಸಂಪುಟ-2, ಪುಟ-300-304, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ-240-241, ಬುಕ್ ಕಾರ್ನರ್ ಶೋರೂಮ್ ಜ್ಹೇಲಮ್) (ಜಮ್‌ಹರ ಅನ್ಸಬುಲ್ ಅರಬ್, ಪುಟ-425, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2007) (ಸಯ್ಯದುನಾ ಅಬೂಬಕರ್ ಸಿದ್ದೀಖ್, ಡಾ. ಅಲಿ ಮುಹಮ್ಮದ್ ಸಲಾಬಿ, ಪುಟ-537-538, ಅಲ್-ಫುರ್ಖಾನ್ ಟ್ರಸ್ಟ್ ಖಾನ್‌ಗಡ್) (ಮುಜಮುಲ್ ಬಲದಾನ್, ಸಂಪುಟ-1, ಪುಟ-109) (ಮುಜಮುಲ್ ಬಲದಾನ್, ಸಂಪುಟ-5, ಪುಟ-315) (ಮಸ್ನದ್ ಅಹ್ಮದ್ ಬಿನ್ ಹಂಬಲ್, ಮಸ್ನದ್ ಉಮ್ರೋ ಬಿನ್ ಅಬ್ಸ, ಸಂಪುಟ-6, ಪುಟ-575-576, ವರದಿ-19675, ಅಲಿಮುಲ್ ಕುತುಬ್ 1998) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-5, ಪುಟ-8-9, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಒಂದು ವರದಿಯ ಪ್ರಕಾರ ಅಶ್‌ಅಸ್ ತನ್ನ ಕೋಮಿನೊಂದಿಗೆ ಪ್ರತಿಜ್ಞೆಯ ಉಲ್ಲಂಘನೆ ಮಾಡಿದ ಕಾರಣದಿಂದ ತನ್ನ ಕೋಮಿಗೆ ಮರಳಿ ಹೋಗಲು ಧೈರ್ಯಪಡಲಿಲ್ಲ. ಬಂಧನದಿಂದ ಬಿಡುಗಡೆಗೊಂಡ ನಂತರ ತನ್ನ ಪತ್ನಿಯಾದ ಉಮ್ಮೇ ಫರ್ವದೊಂದಿಗೆ ಮದೀನದಲ್ಲಿ ತಂಗಿದರು. ಹಝ್ರತ್ ಉಮರ್(ರ)ರ ಕಾಲಘಟ್ಟದಲ್ಲಿ ಇರಾಕ್ ಮತ್ತು ಸಿರಿಯದ ಯುದ್ಧಗಳಲ್ಲಿ ಅಶ್‌ಅಸ್ ಹಿರಿದಾದ ಸಾಧನೆಯನ್ನು ಮಾಡಿದರು. ಆದ್ದರಿಂದ ಅವರ ಗೌರವ ವರ್ಧಿಸಿತು. ಅವನ ಕಳೆದುಹೋದ ಮರ್ಯಾದೆ ಮರಳಿ ಲಭಿಸಿತು. ಪೂರ್ಣ ರೀತಿಯಲ್ಲಿ ಶಾಂತಿ ಮತ್ತು ಸಮಾಧಾನ ಸ್ಥಾಪನೆಗೊಳ್ಳುವ ತನಕ ಹಝ್ರತ್ ಮುಹಾಜಿರ್(ರ) ಮತ್ತು ಹಝ್ರತ್ ಇಕ್ರಿಮ(ರ) ಹಝ್ರ್ ಮೌತ್ ಮತ್ತು ಕಿಂದದಲ್ಲೇ ತಂಗಿದರು. ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಇವು ಕೊನೆಯ ಯುದ್ಧಗಳಾಗಿದ್ದುವು.

ಇದರ ನಂತರ ಅರೇಬಿಯದಿಂದ ದಂಗೆ ಸಂಪೂರ್ಣವಾಗಿ ಕೊನೆಗೊಂಡಿತು ಮತ್ತು ಎಲ್ಲ ಗೋತ್ರಗಳು ಇಸ್ಲಾಮಿನ ಆಡಳಿತದ ಅಧೀನದಲ್ಲಿ ಬಂದುವು.

ಆ ಪ್ರದೇಶದಲ್ಲಿ ಶಾಂತಿ ಸಮಾಧಾನವನು ಸ್ಥಾಪಿಸಲು ಮತ್ತು ದಂಗೆ ಮತ್ತು ದ್ರೋಹದ ಕಾರಣಗಳನ್ನು ಸಂಪೂರ್ಣವಾಗಿ ದಮನಿಸಲು, ಯಮನಿನಲ್ಲಿ ಮಾಡಿದಂತೆ ಇಲ್ಲೂ ಕಠಿಣವಾದ ಕ್ರಮವನ್ನು ಕೈಗೊಂಡರು. (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ-241, ಬುಕ್ ಕಾರ್ನರ್ ಶೋರೂಮ್ ಜ್ಹೇಲಮ್)

ಯಮನ್ ಮತ್ತು ಹಝ್ರ್‌ ಮೌತ್ ಎರಡರಲ್ಲಿ ಯಾವುದಾದರೂ ಒಂದನ್ನು ಆಡಳಿತಕ್ಕಾಗಿ ಆಯ್ಕೆ ಮಾಡಲು ಹಝ್ರತ್ ಮುಹಾಜಿರ್‌ರೊಡನೆ ಹಝ್ರತ್ ಅಬೂಬಕರ್(ರ) ಹೇಳಿದಾಗ ಅವರು ಯಮನನ್ನು ಆಯ್ಕೆ ಮಾಡಿದರು. ಹೀಗೆ ಯಮನನಲ್ಲಿ ಎರಡು ಅಧಿಕಾರಿಗಳು ನಿಶ್ಚಯಿಸಲ್ಪಟ್ಟವು. ಧರ್ಮತ್ಯಾಗಿಗಳು ಮತ್ತು ದಂಗೆಗಾರರ ವಿರುದ್ಧ ಕೆಲಸಗಳನ್ನು ಮಾಡಲು ಹಝ್ರತ್ ಅಬೂಬಕರ್(ರ) ಒಂದು ಮಾರ್ಗಸೂಚಿಯನ್ನು ಹೀಗೆ ಬರೆದರು: ನನ್ನ ಅಭಿಪ್ರಾಯದಲ್ಲಿ ಧರ್ಮತ್ಯಾಗ ಮತ್ತು ದಂಗೆಯ ಕಲೆಯಿಲ್ಲದ ಜನರನ್ನು, ಹಿಂದೆ ಧರ್ಮತ್ಯಾಗಿ ಮತ್ತು ದಂಗೆಯನ್ನು ಮಾಡಿರದ ಜನರನ್ನು ಆಡಳಿತದಲ್ಲಿ ನೀವು ಸೇರಿಸಿರಿ. ನೀವೆಲ್ಲರೂ ಇದರ ಪ್ರಕಾರವೇ ನಡೆಯಿರಿ. ಸೈನ್ಯದಿಂದ ಮರಳಿ ಹೋಗಲು ಬಯಸುವವರನ್ನು ಮರಳಿ ಕಳುಹಿಸಿರಿ. ಶತ್ರುಗಳೊಂದಿಗೆ ಜಿಹಾದ್ ಮಾಡುವಾಗ ಯಾವನೇ ಧರ್ಮತ್ಯಾಗಿ ದಂಗೆಗಾರನಿಂದ ಖಂಡಿತ ಸಹಾಯವನ್ನು ಪಡೆಯಬೇಡಿರಿ.
(ತಾರೀಖ್ ಅತ್ತಬರಿ, ಸಂಪುಟ-2, ಪುಟ-305, ದರುಲ್ ಕುತುಬ್ ಇಲ್‌ಮಿಯ ಲೆಬನಾನ್, 2012)

ಹೆಚ್ಚಿನ ಲೇಖಕರು ವಿಶೇಷವಾಗಿ ಈಗಿನ ಚರಿತ್ರೆಗಾರರು ಹಝ್ರತ್ ಅಬೂಬಕರ್(ರ)ರ ಯುದ್ಧಗಳ ಬಗ್ಗೆ ಪ್ರಸ್ತಾಪಿಸುತ್ತಾ, ಪ್ರವಾದಿತ್ವದ ಸುಳ್ಳು ವಾದವನ್ನು ಮಾಡಿದವರ ವಿರುದ್ಧ ಈ ಎಲ್ಲ ಯುದ್ಧಗಳನ್ನು ಮಾಡಲಾಗಿತ್ತು ಎಂದು ಹೇಳುತ್ತಾರೆ. ಅವರನ್ನು ಖಡ್ಗಬಲದಿಂದ ಬೇರು ಸಹಿತ ಕಿತ್ತು ಎಳೆಯಲಾಯಿತು ಮತ್ತು ಇದೇ ಶರೀಅತಿನ ಶಿಕ್ಷೆಯೆಂದು ಭಾವಿಸಿಕೊಂಡಿರುವರು. ಆದರೆ ಚರಿತ್ರೆಯನ್ನು ಓದುವವನು ಖಂಡಿತವಾಗಿಯೂ ಈ ಮಾತನ್ನು ಒಪ್ಪಲಾರನು. ಪವಿತ್ರ ಖುರ್‌ಆನ್, ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ರೀತಿ ನಡೆವಳಿಕೆ ಮತ್ತು ಹದೀಸುಗಳ ಬೆಳಕಿನಲ್ಲಿ, ಹಿಂದೆ ಹೇಳಲಾದಂತೆ, ನುಬುವ್ವತ್ ವಾದವನ್ನು ಮಾಡಿದ್ದಕ್ಕೆ ಮಾತ್ರ ಅವರ ಮೇಲೆ ಹಝ್ರತ್ ಪೈಗಂಬರ್(ಸ) ಕಾರ್ಯಾಚರಣೆ ನಡೆಸಿರಲಿಲ್ಲ. ಸುಳ್ಳು ಪ್ರವಾದಿಗಳನ್ನು ಬೇರು ಸಹಿತ ಕಿತ್ತುಹಾಕಲು ಮಾತ್ರ ಹಝ್ರತ್ ಅಬೂಬಕರ್(ರ) ಈ ಯುದ್ಧ ಕಾರ್ಯಾಚರಣೆಗಳನ್ನು ಮಾಡಿರಲಿಲ್ಲ. ಬದಲಾಗಿ ಆ ಸುಳ್ಳುಪ್ರವಾದಿಗಳು ದಂಗೆಯೆದ್ದಿದ್ದರು.

ಸಹಾಬರು ಏಕೆ ಯುದ್ಧಗಳನ್ನು ಮಾಡಿದ್ದರು ಎಂಬ ವಿಷಯವನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ನಂತರ ಪ್ರವಾದಿತ್ವ ವಾದ ಮಾಡಿದ ಪ್ರತಿಯೊಬ್ಬ ವ್ಯಕ್ತಿಯ ವಿರುದ್ಧ ಸಹಾಬಿಯರು ಯುದ್ಧ ಮಾಡಿದ್ದರು ಎಂದು ಮೌಲಾನ ಮೌದೂದಿ ಸಾಹಿಬ್ ಬರೆದದ್ದು ಸಹಾಬರ ಹೇಳಿಕೆಗೆ ವಿರುದ್ಧವಾದುದಾಗಿದೆ.

ಮೌಲಾನ ಸಾಹಿಬ್‌ರು ನೆನಪಿಡಬೇಕಾದ ಸಂಗತಿಯೇನೆಂದರೆ, ಹಝ್ರತ್ ಪೈಗಂಬರ್(ಸ)ರ ನಂತರ ಪ್ರವಾದಿತ್ವ ವಾದವನ್ನು ಮಾಡಿದವರಲ್ಲಿ ಎಲ್ಲರೂ ಇಸ್ಲಾಮಿನ ಆಡಳಿತದ ವಿರುದ್ಧ ಯುದ್ಧ ಘೋಷಣೆಯನ್ನು ಮಾಡಿದ್ದರು. ಅಂತಹವರ ವಿರುದ್ಧ ಸಹಾಬಿಯರು ಯುದ್ಧ ಮಾಡಿದ್ದರು. ಇಸ್ಲಾಮಿನ ಸಾಹಿತ್ಯಗಳನ್ನು ಚೆನ್ನಾಗಿ ಓದಿದ್ದಾಗಿ ಮೌಲಾನ ಸಾಹಿಬರು ಬಹಳವಾಗಿ ವಾದಿಸುತ್ತಾರೆ. ಈ ವಿಷಯದ ಬಗ್ಗೆ ಅಭಿಪ್ರಾಯ ಪ್ರಕಟಿಸುವುದಕ್ಕೆ ಮುಂಚಿತವಾಗಿ ಇಸ್ಲಾಮಿನ ಚರಿತ್ರೆಯನ್ನು ಅವರು ಓದಿ ನೋಡಿದ್ದರೆ, ಮುಸೈಲಿಮ ಕದ್ದಾಬ್, ಅಸ್ವದ್ ಅನ್ಸಿ, ಸಜಾಹ್ ಬಿನ್ತ್ ಹಾರಿಸ್ ಮತ್ತು ತುಲೈಹ ಬಿನ್ ಖುವೈಲಿದ್ ಅಸದಿ ಎಲ್ಲರೂ ಮದೀನದ ಆಡಳಿತವನ್ನು ಅನುಸರಿಸುವುದನ್ನು ನಿರಾಕರಿಸಿದವರು ಮತ್ತು ತಮ್ಮ ತಮ್ಮ ಪ್ರದೇಶಗಳಲ್ಲಿ ತಮ್ಮ ಆಡಳಿತಗಳ ಘೋಷಣೆ ಮಾಡಿದ್ದವರು ಆಗಿದ್ದರು ಎಂದು ಗೊತ್ತಾಗುತ್ತಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ತಾರೀಖ್ ಇಬ್ನು ಖಲದೂನ್‌ನನ್ನು ಗಮನವಿಟ್ಟು ಓದಿದ್ದರೆ, ಮೌಲಾನ ಸಾಹಿಬ್‌ರ ಅಭಿಪ್ರಾಯ ತಪ್ಪಾಗಿತ್ತು ಎಂದು ಅವರಿಗೆ ಗೊತ್ತಾಗುತ್ತಿತ್ತು. ಅದರಲ್ಲಿ ಹೀಗೆ ಬರೆಯಲಾಗಿದೆ. ಅರೇಬಿಯದ ಸಾಮಾನ್ಯ ಮತ್ತು ವಿಶಿಷ್ಟ ಜನರು ಧರ್ಮತ್ಯಾಗ ಮಾಡಿರುವರು ಎಂಬ ಸುದ್ದಿ ಮದೀನದಲ್ಲಿ ತಲುಪಿತು. ಖುರೈಶ್ ಮತ್ತು ಸಖೀಫ್ ಗೋತ್ರಗಳು ಮಾತ್ರ ಧರ್ಮತ್ಯಾಗದಿಂದ ಬಚಾವಾದರು. ಮುಸೈಲಿಮನ ವಿಷಯ ಬಹಳ ಶಕ್ತಿ ಪಡೆಯಿತು. ತೈ ಮತ್ತು ಅಸದಿನ ಕೋಮು ತುಲೈಹ ಬಿನ್ ಖುವೈಲಿದಿನ ಅನುಸರಣೆಯನ್ನು ಸ್ವೀಕಾರ ಮಾಡಿಕೊಂಡರು. ಗ್ತಫಾನ್ ಕೂಡ ಧರ್ಮತ್ಯಾಗ ಮಾಡಿತು. ಹವಾಝುನ್ ಕೂಡ ಝಕಾತನ್ನು ತಡೆಯಿತು. ಬನೀ ಸುಲೈಮಿನ ಸರದಾರರು ಕೂಡ ಧರ್ಮತ್ಯಾಗ ಮಾಡಿದರು. ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಗಳು ಯಮನ್, ಯಮಾಮ, ಬನೀ ಅಸದ್ ಮತ್ತು ಇತರ ಎಲ್ಲ ಪ್ರದೇಶಗಳಿಂದ ಮರಳಿ ಬಂದರು. ಅರೇಬಿಯದ ದೊಡ್ಡವರು ಮತ್ತು ಚಿಕ್ಕವರು ಎಲ್ಲರೂ ಅನುಸರಣೆಯನ್ನು ನಿರಾಕರಿಸಿರುವರು ಎಂದು ಅವರು ಹೇಳಿದರು. ಉಸಾಮ ಮರಳಿ ಬಂದರೆ, ಅವರ ಜೊತೆಗೆ ಸೇರಿಕೊಂಡು ಯುದ್ಧ ಮಾಡಬಹುದು ಎಂದು ಯೋಚಿಸಿ ಹಝ್ರತ್ ಅಬೂಬಕರ್(ರ) ಕಾಯುತ್ತಿದ್ದರು. ಆದರೆ ಅಬಸ್ ಮತು ಝುಬ್‌ಯಾನನ ಗೋತ್ರಗಳು ಅವಸರಪಟ್ಟರು. ಮದೀನದ ಬಳಿ ಅಬ್‌ರಕ್ ಎಂಬ ಪ್ರದೇಶದಲ್ಲಿ ಡೇರೆ ಹಾಕಿದರು. ಇನ್ನು ಕೆಲವರು ಧುಲ್‌ಖಿಸ್ಸಕ್ಕೆ ಬಂದು ಡೇರೆ ಹಾಕಿದರು. ಅವರ ಜೊತೆಗೆ ಬನೀ ಅಸದಿನ ಒಪ್ಪಂದ ಕೂಡ ಇತ್ತು. ಬನೀ ಕನಾನದಲ್ಲೂ ಕೆಲವರು ಅವರ ಜೊತೆಗೆ ಸೇರಿದರು. ಮದೀನದ ಸುತ್ತಮುತ್ತ ಬಂದು ಒಟ್ಟುಸೇರಿದರು. ಅವರೆಲ್ಲರೂ ಹಝ್ರತ್ ಅಬೂಬಕರ್(ರ)ರ ಬಳಿಗೆ ಸಂಘವನ್ನು ಕಳುಹಿಸಿದರು. ಅವರು ಹೀಗೆ ಬೇಡಿಕೆ ಇರಿಸಿದರು: ನಮಾಝ್ ವರೆಗೂ ನಾವು ಒಪ್ಪುತ್ತೇವೆ. ಆದರೆ ಝಕಾತ್ ಪಾವತಿಸಲು ನಾವು ತಯಾರಿಲ್ಲ. ಆದರೆ ಹಝ್ರತ್ ಅಬೂಬಕರ್(ರ) ಅವರ ಮಾತನ್ನು ನಿರಾಕರಿಸಿದರು.

ಇದರಿಂದ ಇದು ಸ್ಪಷ್ಟವಾಗುತ್ತದೆ. ಆಡಳಿತದ ವಿರುದ್ಧ ದಂಗೆಯೆದ್ದಿದ್ದ ಜನರ ವಿರುದ್ಧ ಸಹಾಬಿಯರು ಯುದ್ಧ ಮಾಡಿದ್ದರು. ಅವರು ತೆರಿಗೆ ಪಾವತಿ ಮಾಡುವುದನ್ನು ನಿರಾಕರಿಸಿದ್ದರು ಮತ್ತು ಮದೀನದ ಮೇಲೆ ದಾಳಿ ನಡೆಸಿದ್ದರು.

ಇಲ್ಲಿ ಮಾತನ್ನು ಒಪ್ಪದಿದ್ದರೆ, ದಾಳಿ ನಡೆಸುವೆವು ಎಂದು ಹೇಳಿ ಮದೀನದ ಸುತ್ತ ಒಟ್ಟು ಸೇರಿದ್ದರು. ಅರೇಬಿಯದ ಅರ್ಧ ಭೂಮಿ ನನಗೆ ಮತ್ತು ಅರ್ಧ ಭೂಮಿ ಖುರೈಶಿಗಳಿಗೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ಮುಸೈಲಿಮ ಪತ್ರ ಬರೆದು ಹೇಳಿದ್ದನು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅವನು ಹಜರ್ ಮತ್ತು ಯಮಾಮದಲ್ಲಿ ನಿಶ್ಚಯಿಸಲಾದ ಅಧಿಕಾರಿ ಸಮಾಮ ಬಿನ್ ಆಸಾಲ್‌ರನ್ನು ಹೊರಗೆ ಹಾಕಿದನು ಮತ್ತು ಸ್ವತಃ ಆ ಪ್ರದೇಶದ ಅಧಿಕಾರಿಯಾದನು. ಅವನು ಮುಸ್ಲಿಮರ ಮೇಲೆ ದಾಳಿ ನಡೆಸಿದ್ದನು. ಅದೇ ರೀತಿಯಲ್ಲಿ ಅವನು ಮದೀನದ ಇಬ್ಬರು ಸಹಾಬಿಯರಾದ ಹಬೀಬ್ ಬಿನ್ ಝೈದ್ ಮತ್ತು ಅಬ್ದುಲ್ಲಾಹ್ ಬಿನ್ ವಹಬ್‌ರನ್ನು ಬಂಧಿಸಿದನು ಮತ್ತು ಒತ್ತಾಯಪೂರ್ವಕವಾಗಿ ತನ್ನ ಪ್ರವಾದಿತ್ವವನ್ನು ನಂಬಲು ಹೇಳಿದ್ದನು. ಮೊದಲು ಪ್ರಸ್ತಾಪಿಸಲಾದಂತೆ ಅಬ್ದುಲ್ಲಾಹ್ ಬಿನ್ ವಹಬ್(ರ) ಹೆದರಿಕೊಂಡು ಅವನ ಮಾತನ್ನು ಅಂಗೀಕರಿಸಿದರು. ಆದರೆ ಹಬೀಬ್ ಬಿನ್ ಝೈದ್(ರ) ಅವನ ಮಾತನ್ನು ನಿರಾಕರಿಸಿದರು. ಆಗ ಮುಸೈಲಿಮ ಅವರ ಅಂಗಾಂಗಗಳನ್ನು ಕತ್ತರಿಸಿ ಬೆಂಕಿಗೆ ಹಾಕಿದರು. ಅದೇ ರೀತಿಯಲ್ಲಿ ಯಮನಿನಲ್ಲಿ ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಗಳನ್ನು ಅವನು ಬಂಧಿಸಿದನು ಮತ್ತು ಕೆಲವರಿಗೆ ಕಠಿಣವಾದ ಶಿಕ್ಷೆಯನ್ನು ನೀಡಿದನು. ಅದೇ ರೀತಿಯಲ್ಲಿ ಅಸ್ವದ್ ಅನ್ಸಿ ಕೂಡ ಬಂಡಾಯವೆದ್ದಿದ್ದನು ಎಂದು ತಬರಿಯಲ್ಲಿ ಬರೆಯಲಾಗಿದೆ. ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಗಳಿಗೆ ಅವನು ತೊಂದರೆ ಕೊಟ್ಟನು ಮತ್ತು ಅವರಿಂದ ಝಕಾತಿನ ಸಂಪತ್ತನ್ನು ದೋಚಲು ಆಜ್ಞಾಪಿಸಿದನು. ಅನಂತರ ಅವನು ಸನ್‌ಅದಲ್ಲಿ ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ ಅಧಿಕಾರಿಯಾದ ಶಹರ್ ಬಿನ್ ಬಾಜ್ಞಾನಿನ ಮೇಲೆ ದಾಳಿ ನಡೆಸಿದನು. ಅನೇಕ ಮುಸ್ಲಿಮರನ್ನು ವಧಿಸಿದನು, ಲೂಟಿ ಮಾಡಿದನು, ಗವರ್ನರ್‌ರನ್ನು ವಧಿಸಿದನು. ಅವರನ್ನು ವಧಿಸಿದ ನಂತರ ಅವರ ಮುಸ್ಲಿಮ್ ಪತ್ನಿಯನ್ನು ಒತ್ತಾಯಪೂರ್ವಕವಾಗಿ ವಿವಾಹ ಮಾಡಿಕೊಂಡನು. ಬನೂ ನಜ್‌ರಾನ್ ಗೋತ್ರದವರು ಕೂಡ ದಂಗೆ ಎದ್ದಿದ್ದರು. ಅವರು ಕೂಡ ಅಸ್ವದ್ ಅನ್ಸಿಯ ಜೊತೆಗೆ ಸೇರಿದ್ದರು. ಅವರು ಇಬ್ಬರು ಸಹಾಬಿಗಳಾದ ಅಮ್ರ್ ಬಿನ್ ಹಝ್ಮ್ ಮತ್ತು ಖಾಲಿದ್ ಬಿನ್ ಸಈದ್‌ರನ್ನು ಆ ಪ್ರದೇಶದಿಂದ ಹೊರಗೆ ಹಾಕಿದನು.

ಈ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಪೈಗಂಬರ್(ಸ)ರ ಸಮುದಾಯದಲ್ಲಿ ಪ್ರವಾದಿತ್ವದ ವಾದವನ್ನು ಮಾಡಿದ ಕಾರಣದಿಂದ ಸುಳ್ಳು ಪ್ರವಾದಿಗಳ ವಿರುದ್ಧ ಸಹಾಬಿಯರು ಯುದ್ಧ ಮಾಡಿರಲಿಲ್ಲ. ಬದಲಾಗಿ ಅವರು ಇಸ್ಲಾಮಿನ ಶರೀಅತನ್ನು ರದ್ದುಪಡಿಸಿ ಹೊಸ ಕಾನೂನನ್ನು ಜಾರಿಗೊಳಿಸುತ್ತಿದ್ದರು ಮತ್ತು ಪ್ರದೇಶಗಳ ಅಧಿಕಾರಿಯನ್ನು ವಾದಿಸುತ್ತಿದ್ದರು. ಮಾತ್ರವಲ್ಲ ಅವರು ಸಹಾಬಿಯರನ್ನು ವಧಿಸಿದ್ದರು, ಇಸ್ಲಾಮಿಕ ರಾಷ್ಟ್ರಗಳ ಮೇಲೆ ದಾಳಿ ನಡೆಸಿದ್ದರು, ಸ್ಥಾಪಿತವಾಗಿದ್ದ ಆಡಳಿತದ ವಿರುದ್ಧ ದಂಗೆಯೆದ್ದಿದ್ದರು ಮತ್ತು ತಾವು ಸ್ವತಂತ್ರರೆಂದು ಘೋಷಿಸಿದ್ದರು. ಈ ಘಟನೆಗಳು ಇದ್ದು ಕೂಡ ಎಲ್ಲ ಸಹಾಬಿಯರು ಪ್ರವಾದಿತ್ವ ವಾದಿಗಳ ವಿರುದ್ಧ ಯುದ್ಧ ಮಾಡಿದ್ದರು ಎಂದು ಹೇಳುವುದು ಸುಳ್ಳು ಅಲ್ಲದೇ ಮತ್ತೇನು? ತಿರುಚಿ ಮಗುಚಿ ಮತ್ತು ವಕ್ರವಾಗಿ ಇಸ್ಲಾಮಿನ ಚರಿತ್ರೆಯನ್ನು ಮುಂದಿರಿಸುವ ಜನರು ಇಸ್ಲಾಮಿನ ಸೇವೆಯನ್ನು ಮಾಡುತ್ತಿಲ್ಲ. ಅವರ ಉದ್ದೇಶ ಇಸ್ಲಾಮಿನ ಸೇವೆಯಾಗಿದ್ದರೆ ಅವರು ಸತ್ಯಕ್ಕೆ ಅತ್ಯಂತ ಉನ್ನತ ಸ್ಥಾನ ನೀಡುತ್ತಿದ್ದರು ಮತ್ತು ತಪ್ಪು ಹೇಳಿಕೆ ಹಾಗೂ ಘಟನೆಗಳನ್ನು ವಿರೂಪಗೊಳಿಸಿ ಮುಂದಿರಿಸುವುದರಿಂದ ದೂರವಿರುತ್ತಿದ್ದರು.

(ಮೌಲಾನ ಮೌದೂದಿ ಸಾಹಿಬ್ ಕೆ ರಿಸಾಲ "ಖಾದಿಯಾನಿ ಮಸ್‌ಅಲ" ಕಾ ಜವಾಬ್, ಅನ್ವಾರುಲ್ ಉಲೂಮ್, ಸಂಪುಟ–24, ಪುಟ–11–14)

ಒಬ್ಬ ಚರಿತ್ರೆಗಾರ ಬರೆಯುತ್ತಾರೆ: ಈಗ ಅರೇಬಿಯದ ಎಲ್ಲ ಬಂಡಾಯಗಾರರ ಕೊನೆಯಾಗಿತ್ತು ಮತ್ತು ಎಲ್ಲ ಧರ್ಮತ್ಯಾಗಿಗಳನ್ನು ದಮನಿಸಲಾಗಿತ್ತು.

ದೇಶವನ್ನು ಪೂರ್ತಿಯಾಗಿ ಸುತ್ತುವರೆದಿದ್ದ ಈ ಪಿತೂರಿಯನ್ನು ಎಂತಹ ಯೋಜನೆ ಮತ್ತು ಎಷ್ಟು ವೇಗವಾಗಿ ಬೇರುಸಹಿತ ಕಿತ್ತುಹಾಕಲಾಯಿತು ಎಂಬುದು ಹಝ್ರತ್ ಅಬೂಬಕರ್(ರ)ರ ಉನ್ನತ ಮಟ್ಟದ ಸಾಮರ್ಥ್ಯಕ್ಕೆ ಕನ್ನಡಿಯಾಗಿದೆ. ಯಾವ ರೀತಿಯಲ್ಲಿ ಹೆಜ್ಜೆ ಹೆಜ್ಜೆಗೂ ಹಝ್ರತ್ ಅಬೂಬಕರ್(ರ)ರಿಗೆ ದೈವಿಕ ಸಹಾಯ ಲಭಿಸಿತ್ತು ಎಂದು ಸ್ಪಷ್ಟವಾಗುತ್ತದೆ.

ಒಂದು ವರ್ಷಕ್ಕಿಂತ ಕಡಿಮೆ ಸಮಯದಲ್ಲಿ ಧರ್ಮತ್ಯಾಗದ ಪಿತೂರಿ ಮತ್ತು ದಂಗೆಯ ಮೇಲೆ ನಿಯಂತ್ರಣ ಸಾಧಿಸುವುದು ಮತ್ತು ಅರಬ್ ರಾಜ್ಯದಲ್ಲಿ ಇಸ್ಲಾಮಿನ ಆಡಳಿತವನ್ನು ಪುನಃ ಸ್ಥಾಪನೆಗೊಳಿಸುವುದು ಒಂದು ವಿಸ್ಮಯಕರವಾದ ಕಾರ್ಯಸಾಧನೆಯಾಗಿದೆ. ಹಝ್ರತ್ ಅಬೂಬಕರ್(ರ)ರಿಗೆ ಇಸ್ಲಾಮಿನ ವಿಜಯದಿಂದ ಅತಿಯಾದ ಸಂತೋಷವಿತ್ತು. ಆದರೆ ಈ ಖುಶಿಯಲ್ಲಿ ಗರ್ವ ಮತ್ತು ಅಹಂಕಾರ ಅವರಿಗೆ ನಾಮ ಮಾತ್ರಕ್ಕೂ ಇರಲಿಲ್ಲ. ಏಕೆಂದರೆ ಆದದ್ದೆಲ್ಲ ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ಮಾತ್ರವಾಗಿತ್ತು ಎಂದು ಅವರಿಗೆ ಗೊತ್ತಿತ್ತು. ಬೆರಳೆಣಿಕೆಯಷ್ಟು ಇದ್ದ ಮುಸ್ಲಿಮರ ಮೂಲಕ ಸಂಪೂರ್ಣ ಅರೇಬಿಯದ ಧರ್ಮತ್ಯಾಗಿಗಳ ಶಕ್ತಿಶಾಲಿ ಸೈನ್ಯಗಳನ್ನು ಎದುರಿಸಿ ಅವರನ್ನು ಸೋಲಿಸಿ ಇಸ್ಲಾಮಿನ ಧ್ವಜವನ್ನು ಅತ್ಯಂತ ಪ್ರತಾಪ ಮತ್ತು ವೈಭವಶಾಲಿಯಾಗಿ ಪುನಃ ಮೇಲೇರಿಸುವುದಕ್ಕೆ ಅವರಿಗೆ ಶಕ್ತಿ ಇರಲಿಲ್ಲ. ದೀನಿನ ಐಕ್ಯವನ್ನು ಬಲಪಡಿಸಲು ಮತ್ತು ಇಸ್ಲಾಮನ್ನು ಉನ್ನತ ಮಟ್ಟಕ್ಕೆ ತಲುಪಿಸಲು ಏನೆಲ್ಲ ಹೆಜ್ಜೆಗಳನ್ನು ತೆಗೆಯಬೇಕು ಎಂಬುದಾಗಿತ್ತು ಅವರ ಮುಂದೆ ಈಗ ಇದ್ದ ಸಮಸ್ಯೆ. ಹಝ್ರತ್ ಅಬೂಬಕರ್(ರ)ರ ರಾಜಕೀಯ ಕೇಂದ್ರಬಿಂಧು ಕೇವಲ ಇಸ್ಲಾಮಿನ ಪ್ರತಾಪವಾಗಿತ್ತು. ಇದೇ ಬಯಕೆ ಯಾವಾಗಲೂ ಅವರ ಹೃದಯ ಮತ್ತು ಮನಸ್ಸಲ್ಲಿ ಇರುತ್ತಿತ್ತು. (ಹಝ್ರತ್ ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ–241, ಬುಕ್ ಕಾರ್ನರ್ ಶೋರೂಮ್ ಜ್ಹೇಲಮ್)

ಧರ್ಮತ್ಯಾಗಿ ದಂಗೆಗಾರರನ್ನು ಬೇರು ಸಹಿತ ಕಿತ್ತು ಹಾಕಿದ ನಂತರ, ಈ ಖಲೀಫತುಲ್ ರಸೂಲ್‌ರ ಮುಂದೆ ಯಾವುದೇ ಪಿತೂರಿಗಾರ ಬೇರೂರಿ ನಿಲ್ಲಲು ಸಾಧ್ಯವಲ್ಲವೆಂದು ಪ್ರತಿಯೊಬ್ಬರಿಗೂ ಗೊತ್ತಾಯಿತು. ಆದರೆ ಸಾಮಾನ್ಯ ಜನರಂತೆ, ಎಲ್ಲವೂ ಸರಿಯಾಯಿತು ಎಂದು ಹಝ್ರತ್ ಅಬೂಬಕರ್(ರ) ಭಾವಿಸುತ್ತಿರಲಿಲ್ಲ. ಧರ್ಮತ್ಯಾಗ ಮತ್ತು ದಂಗೆಯ ಪಿತೂರಿಯನ್ನು ಮಾಡುವ ಕನಸನ್ನು ಕಾಣುತ್ತಿರುವವರನ್ನು ಪುನಃ ಎಬ್ಬಿಸಿ ಅಶಾಂತಿ ಹರಡಲು ಅರೇಬಿಯದ ಗಡಿಪ್ರದೇಶಗಳಲ್ಲಿ ಇರುವ ಬಾಹ್ಯಶಕ್ತಿಗಳು ಕಾರಣಕರ್ತರಾಗುವುವು ಎಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಅರೇಬಿಯದ ಗಡಿಪ್ರದೇಶಗಳ ಸುರಕ್ಷೆ ಮತ್ತು ಇಸ್ಲಾಮಿನ ಆಡಳಿತವನ್ನು ಶಕ್ತಿಶಾಲಿ ಶತ್ರುಗಳಿಂದ ಸುರಕ್ಷಿತಗೊಳಿಸಿಕ್ಕಾಗಿ ಈ ಶಕ್ತಿಶಾಲಿ ಸಮುದಾಯಗಳಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸುವುದು ಆವಶ್ಯಕವಾಗಿದೆ. ಹಾಗಾದರೆ, ಈ ಸಮುದಾಯಗಳು ಇಸ್ಲಾಮಿನ ಜಾಗತಿಕ ಸಂದೇಶವನ್ನು ಒಪ್ಪಿಕೊಂಡು ಅಥವಾ ಅರಿತುಕೊಂಡು ಸ್ವತಃ ಶಾಂತಿ ಮತ್ತು ಸಮಾಧಾನದಿಂದ ತನ್ನ ಜೀವಿತಗಳನ್ನು ಸಾಗಿಸಲು ಸಾಧ್ಯತೆಯಿತ್ತು. ಇತರರು ಕೂಡ ಅವರಿಂದ ಸುರಕ್ಷಿತರಾಗಿ ನೆಮ್ಮದಿಯಿಂದ ಸ್ವತಂತ್ರರಾಗಿ ತಮ್ಮ ತಮ್ಮ ಧರ್ಮಗಳನ್ನು ಪಾಲಿಸಲು ಸಾಧ್ಯತೆಯಿತ್ತು. (ಅಯ್ಯಿದುನಾ ಸಿದ್ದೀಕ್ ಅಕ್ಬರ್, ಹಕೀಮ್ ಗುಲಾಮ್ ನಬಿ, ಎಂ.ಎ, ಪುಟ–178)

ಹೇಗಿದ್ದರೂ ಅದಕ್ಕಾಗಿ ಹಝ್ರತ್ ಅಬೂಬಕರ್(ರ) ಕೈಗೊಂಡ ಮಾರ್ಗ ಮತ್ತು ಯುಕ್ತಿಯ ಬಗ್ಗೆ ಚರಿತ್ರೆಯ ಗ್ರಂಥಗಳಲ್ಲಿ ಬರೆಯಲಾಗಿದೆ. ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಯುದ್ಧಗಳು ಮತ್ತು ಕಾರ್ಯಾಚರಣೆಗಳು ಕೊನೆಗೊಳಿಸಿದ ನಂತರ ಮುಂದಿನ ನಡೆವಳಿಕೆ ಕ್ರಮಗಳ ಕುರಿತು ಆಲೋಚನೆ ಮಾಡುವುದರಲ್ಲಿ ಹಝ್ರತ್ ಅಬೂಬಕರ್(ರ) ನಿರತರಾದರು. ಅರಬ್ ಮತ್ತು ಇಸ್ಲಾಮಿನ ದೀರ್ಘಕಾಲೀನ ಶತ್ರುಗಳಾದ ಇರಾನ್ ಮತ್ತು ರೋಮಿನ ಆಡಳಿತಗಳಿಂದ ಸ್ಥಾಯಿಯಾಗಿ ಸುರಕ್ಷಿತರಾಗಲಿಕ್ಕಾಗಿ ಒಂದು ಸಂಪೂರ್ಣ ಯೋಜನೆಯನ್ನು ಮಾಡಲು ಅವರು ಯೋಚಿಸಿದರು. ಏಕೆಂದರೆ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ಜೀವಿತ ಕಾಲದಲ್ಲೂ ಈ ಎರಡು ಶಕ್ತಿಗಳು ಅರೇಬಿಯವನ್ನು ತನ್ನ ಅಧೀನದಲ್ಲಿ ಇರಿಸಲು ಬಯಸುತ್ತಿದ್ದುವು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅನೇಕ ಪ್ರದೇಶಗಳಲ್ಲಿ ಮತ್ತು ಗೋತ್ರಗಳಲ್ಲಿ ಧರ್ಮತ್ಯಾಗ ಮತ್ತು ಬಂಡಾಯದ ಬೆಂಕಿಯು ಮದೀನದ ಆಡಳಿತವನ್ನು ಆವರಿಸಿದಾಗ ಇದುವೇ ಸರಿಯಾದ ಸಮಯವೆಂದು ಭಾವಿಸಿಕೊಂಡು ಹರ್ಖಲಿನ ಸೇನೆಗಳು ಸಿರಿಯದಲ್ಲಿ ಮತ್ತು ಇರಾನಿನ ಸೇನೆಗಳು ಇರಾಕಿನಲ್ಲಿ ಒಟ್ಟುಗೂಡಿದುವು. ಆದ್ದರಿಂದ ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ನಿರ್ದೇಶನ ಪ್ರಕಾರ ರೋಮನರ ವಿರುದ್ಧ ಮೊದಲನೇ ಸೈನ್ಯವನ್ನು ಹಝ್ರತ್ ಉಸಾಮರ ನೇತೃತ್ವದಲ್ಲಿ ಕಳುಹಿಸಿದ್ದ ಹಝ್ರತ್ ಅಬೂಬಕರ್(ರ) ಈ ಶಕ್ತಿಶಾಲಿ ಮತ್ತು ಹಿಂಸೆಯ ಶಕ್ತಿಗಳ ಬಗ್ಗೆ ಚಿಂತಿಸದೇ ಇರಲು ಸಾಧ್ಯವಲ್ಲ. ಅಷ್ಟರಲ್ಲಿ ಹಝ್ರತ್ ಮುಸನ್ನ(ರ) ಸ್ವತಃ ಮದೀನಕ್ಕೆ ಬಂದರು. ಹಝ್ರತ್ ಅಬೂಬಕರ್(ರ)ರಿಗೆ ಇರಾಕಿನ ಸ್ಥಿತಿಗತಿಗಳ ಬಗ್ಗೆ ತಿಳಿಸಿದರು. ಎಂದರೆ ದಜ್‌ಲ ಮತ್ತು ಡೆಲ್ಟ ಪ್ರದೇಶಗಳಲ್ಲಿ ನೆಲೆಸಿರುವ ಅರಬ್ ಗೋತ್ರದವರು ಅಲ್ಲಿಯ ಪ್ರಾದೇಶಿಕ ನಿವಾಸಿಗಳ ಕೈಗಳಿಂದ ವಿಪತ್ತಿಗೆ ಸಿಲುಕಿದ್ದರು.

ಅರೇಬಿಯರು ಹೆಚ್ಚಾಗಿ ಕೃಷಿಗೆಲಸ ಮಾಡುತ್ತಿದ್ದರು. ಫಸಲು ತಯಾರಾಗುವಾಗ ಪ್ರಾದೇಶಿಕ ಜನರು ಅದನ್ನು ಲೂಟಿ ಮಾಡುತ್ತಿದ್ದರು. ಆದ್ದರಿಂದ ಇಸ್ಲಾಮಿನ ಸೈನ್ಯವನ್ನು ಕಳುಹಿಸಿ ಆ ಜನರನ್ನು ವಿಪತ್ತಿನಿಂದ ರಕ್ಷಿಸಲು ಹಝ್ರತ್ ಮುಸನ್ನ ಬಿನ್ ಹಾರಿಸ್ ವಿನಂತಿಸಿದರು. ಹಝ್ರತ್ ಅಬೂಬಕರ್(ರ) ಮದೀನದ ಸಲಹೆಗಾರ ಸಹಾಬಿಯರಿಂದ ಅಭಿಪ್ರಾಯ ಕೇಳಿದರು. ಹಝ್ರತ್ ಮುಸನ್ನ ಬಿನ್ ಹಾರಿಸ್(ರ) ಸಲಹೆಯನ್ನು ಮುಂದಿರಿಸಿದರು. ಮದೀನದ ಜನರಿಗೆ ಇರಾಕಿನ ಸ್ಥಿತಿಗಳ ಬಗ್ಗೆ ತಿಳಿವು ಇಲ್ಲದ ಕಾರಣದಿಂದ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಕರೆದುಕೊಂಡು ಪೂರ್ತಿ ಸಂಗತಿಯನ್ನು ಮುಂದಿರಿಸಲು ಸಹಾಬಿಯರು ಸಲಹೆ ಕೊಟ್ಟರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಆ ದಿನಗಳಲ್ಲಿ ಯಮಾಮದಲ್ಲಿದ್ದರು. ಆದ್ದರಿಂದ ಹಝ್ರತ್ ಅಬೂಬಕರ್(ರ) ಅವರನ್ನು ಮದೀನಕ್ಕೆ ಕರೆದರು. ಸಹಾಯಕ ಸೈನ್ಯವನ್ನು ಕಳುಹಿಸಲು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಕೂಡ ಸಲಹೆ ಕೊಟ್ಟರು. ಅವರ ಸಲಹೆಯನ್ನು ಕೇಳಿ ಇತರ ಸಹಾಬಿಯರು ಕೂಡ ಹಝ್ರತ್ ಮುಸನ್ನರ ಅಭಿಪ್ರಾಯವನ್ನು ಒಪ್ಪಿಕೊಂಡರು.

ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್(ರ)ರಿಗೆ ಹೀಗೆ ಬರೆದರು: ಇರಾಕಿಗೆ ತಲುಪಿ ಜನರನ್ನು ತನ್ನ ಜೊತೆಗೆ ಸೇರಿಸಿರಿ ಮತ್ತು ಅವರನ್ನು ಅಲ್ಲಾಹನ ಕಡೆಗೆ ಆಹ್ವಾನಿಸಿರಿ. ಅವರು ಸ್ವೀಕಾರ ಮಾಡಿದರೆ ಸರಿ, ಇಲ್ಲದಿದ್ದರೆ ಅವರಿಂದ ಜಿಝ್ಯಿಯ ವಸೂಲು ಮಾಡಿರಿ. ಜಿಝ್ಯಿಯ ಕೊಡುವುದನ್ನೂ ನಿರಾಕರಿಸಿದರೆ ಅವರ ವಿರುದ್ಧ ಯುದ್ಧ ಮಾಡಿರಿ. ಮತ್ತೊಂದು, ಸೈನ್ಯದಲ್ಲಿ ಸೇರ್ಪಡೆಯಾಗಲು ಯಾರನ್ನೂ ಒತ್ತಾಯಪಡಿಸಬೇಡ ಎಂದೂ ಧರ್ಮತ್ಯಾಗಿ ಮಾಡಿದ ನಂತರ ಪುನಃ ಮುಸ್ಲಿಮರಾದ ಯಾರನ್ನೂ ಖಲೀಫರ ಅನುಮತಿ ವಿನಾ ಇಸ್ಲಾಮಿನ ಸೇನೆಯಲ್ಲಿ ಸೇರಿಸಬೇಡ. ಮುಸ್ಲಿಮರ ಬಳಿಯಿಂದ ಸಾಗುವಾಗ ಅವರನ್ನು ತನ್ನ ಜೊತೆಗೆ ಸೇರಿಸಿರಿ. ಅನಂತರ ಹಝ್ರತ್ ಅಬೂಬಕರ್(ರ) ಖಾಲಿದ್(ರ)ರ ಸಹಾಯಕ್ಕಾಗಿ ಸೈನ್ಯವನ್ನು ತಯಾರಿಸುವ ಕೆಲಸದಲ್ಲಿ ತೊಡಗಿಕೊಂಡರು. (ಅಲ್‌ಬಿದಾಯ ವನ್ನಿಹಾಯ ಲಿಇಬ್ನೆ ಅಸೀರ್, ಸಂಪುಟ–3, ಭಾಗ–6, ಪುಟ–338, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಯಮಾಮದಿಂದ ಇರಾಕಿನ ಕಡೆಗೆ ಹೋಗುವಾಗ ಹಝ್ರತ್ ಖಾಲಿದ್ ಬಿನ್ ವಲೀದ್(ರ) ತನ್ನ ಸೈನ್ಯವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದರು. ಎಲ್ಲರನ್ನು ಒಂದೇ ಮಾರ್ಗದಿಂದ ಕಳುಹಿಸಲಿಲ್ಲ. ಬದಲಾಗಿ ಹಝ್ರತ್ ಮುಸನ್ನರನ್ನು ತಾನು ಹೊರಡುವುದಕ್ಕಿಂತ ಎರಡು ದಿನಗಳ ಮುಂಚೆ ಕಳುಹಿಸಿದರು. ಅನಂತರ ಅದ್ದಿ ಬಿನ್ ಹಾತಿಮ ಮತ್ತು ಆಸಿಂ ಬಿನ್ ಅಮ್ರ್‌ರನ್ನು ಒಂದೊಂದು ದಿನದ ವ್ಯತ್ಯಾಸದಲ್ಲಿ ರವಾನೆ ಮಾಡಿದರು. ಎಲ್ಲರ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಸ್ವತಃ ಹೊರಟರು. ಒಟ್ಟಾಗಿ ಒಂದೇ ಸವನೆ ಶತ್ರುಗಳೊಡನೆ ಮುಖಾಮುಖಿಯಾಗಲಿಕ್ಕಾಗಿ ಎಲ್ಲರೊಡನೆ ಜಫೀರ್‌ನಲ್ಲಿ ಒಟ್ಟುಸೇರಲು ವಾಗ್ದಾನ ಮಾಡಲಾಯಿತು. ಜಫೀರ್ ಎಂಬುದು ಬಸ್ರದಿಂದ ಮಕ್ಕದ ಕಡೆಗೆ ಹೋಗುವಾಗ ಮೊದಲ ತಂಗುದಾಣವಾಗಿದೆ. ಈ ಗಡಿಪ್ರದೇಶ ಇರಾನಿನ ಎಲ್ಲ ಗಡಿಪ್ರದೇಶಗಳಿಗಿಂತ ಪ್ರತಾಪ ಮತ್ತು ವೈಭವದಲ್ಲಿ ಅತ್ಯಂತ ಹಿರಿದಾದದ್ದು ಮತ್ತು ಸುದೃಢವಾದದ್ದೂ ಆಗಿತ್ತು. ಅದರ ಅಧಿಕಾರಿ ಹುರ್ಮುಝ್ ಆಗಿದ್ದನು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–309, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್, ಸಂಪುಟ–2, ಪುಟ–319) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–239, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಖಾಲಿದ್ ಬಿನ್ ವಲೀದ್(ರ)ರ ಸೈನಿಕರ ಸಂಖ್ಯೆ ಬಹಳ ಕಡಿಮೆಯಾಗಿತ್ತು. ಏಕೆಂದರೆ, ಒಂದು ಸೇನೆಯ ಬಹುತೇಕ ಪಾಲು ಯಮಾಮ ಯುದ್ಧದಲ್ಲಿ ಭಾಗಿಯಾಗಿತ್ತು. ಮತ್ತೊಂದು ಸೈನ್ಯದಲ್ಲಿ

ಸೇರ್ಪಡೆಯಾಗಲು ಯಾರನ್ನೂ ಒತ್ತಾಯಪಡಿಸಬೇಡ ಎಂದೂ ಧರ್ಮತ್ಯಾಗಿ ಮಾಡಿದ ನಂತರ ಪುನಃ ಮುಸ್ಲಿಮರಾದ ಯಾರನ್ನೂ ಖಲೀಫರ ಅನುಮತಿ ವಿನಾ ಇಸ್ಲಾಮಿನ ಸೇನೆಯಲ್ಲಿ ಸೇರಿಸಬೇಡ ಎಂದೂ ಹಝ್ರತ್ ಅಬೂಬಕರ್(ರ) ನಿರ್ದೇಶನ ನೀಡಿದ್ದರು. ಹೀಗೆ ಹೆಚ್ಚಿನ ಸಹಾಯಕ ಸೇನೆಗಾಗಿ ವಿನಂತಿಸಲಾದಾಗ ಹಝ್ರತ್ ಅಬೂಬಕರ್(ರ) ಒಬ್ಬ ವ್ಯಕ್ತಿಯಾದ ಖಅ್‌ಖಾಅ್ ಬಿನ್ ಅಮ್ರ್‌ರನ್ನು ಮಾತ್ರ ಕಳುಹಿಸಿದರು. ಜನರು ಅಚ್ಚರಿಪಟ್ಟರು. ಆಗ ಯಾವ ಸೈನ್ಯದಲ್ಲಿ ಖಅ್‌ಖಾಅ್‌ರಂತಹ ವ್ಯಕ್ತಿ ಇರುವರೋ ಅದು ಎಂದಿಗೂ ಪರಾಜಿತಗೊಳ್ಳದು ಎಂದು ಹೇಳಲಾಯಿತು. ಅನಂತರ ಹಝ್ರತ್ ಖಾಲಿದ್‌ರಿಗೆ ಹೀಗೆ ಬರೆದರು: ಹಝ್ರತ್ ಪೈಗಂಬರ್(ಸ)ರ ನಂತರ ಹಿಂದಿನಂತೆ ಇಸ್ಲಾಮಿನಲ್ಲಿ ಸ್ಥಿರರಾಗಿರುವ ಜನರನ್ನು ಮತ್ತು ಧರ್ಮತ್ಯಾಗಿಗಳ ವಿರುದ್ಧದ ಯುದ್ಧಗಳಲ್ಲಿ ಭಾಗಿಯಾದ ಜನರನ್ನು ತನ್ನ ಸೈನ್ಯದಲ್ಲಿ ಸೇರ್ಪಡೆಯಾಗಲು ಹುರಿದುಂಬಿಸು. ಈ ಪತ್ರ ಲಭಿಸಿದಾಗ ಹಝ್ರತ್ ಖಾಲಿದ್(ರ) ತನ್ನ ಸೈನ್ಯವನ್ನು ಕ್ರಮಪಡಿಸಲು ಶುರುಮಾಡಿದರು. (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ-268, ಬುಕ್ ಕಾರ್ನರ್ ಶೋರೂಮ್ ಝೇಲಮ್)

ಇರಾಕಿನ ರೈತರಿಗೆ ಸಂಬಂಧಿಸಿ ಹಝ್ರತ್ ಅಬೂಬಕರ್(ರ) ತೋರಿಸಿದ ವಿವೇಕಯುತ ಕಾರ್ಯದ ಬಗ್ಗೆ ಹೀಗೆ ಬರೆಯಲಾಗಿದೆ: ಅರೇಬಿಯರು ಇರಾಕಿನ ಕೃಷಿಭೂಮಿಗಳಲ್ಲಿ ರೈತರಾಗಿ ಕೆಲಸ ಮಾಡುತ್ತಿದ್ದರು. ಇರಾನಿನ ಜಮೀನುದಾರರು ಬಡ ಅರೇಬಿಯರ ಮೇಲೆ ಅತಿಯಾಗಿ ಹಿಂಸೆ ಮಾಡುತ್ತಿದ್ದರು. ಅವರೊಂದಿಗೆ ಗುಲಾಮರಿಗಿಂತ ಕೀಳುತರವಾಗಿ ವರ್ತಿಸುತ್ತಿದ್ದರು. ಯುದ್ಧದ ವೇಳೆ ಅರೇಬಿಯದ ರೈತರಿಗೆ ಯಾವುದೇ ರೀತಿಯ ತೊಂದರೆ ಕೊಡಬಾರದು ಎಂದೂ ಯಾವುದೇ ವಿಧದ ದುರ್ವರ್ತನೆ ತೋರಿಸಬಾರದು ಎಂದು ಹಝ್ರತ್ ಅಬೂಬಕರ್(ರ) ಆದೇಶ ನೀಡಿದರು. ಅಲ್ಲಿ ಅರೇಬಿಯರ ಆಡಳಿತ ಸ್ಥಾಪನೆಗೊಂಡರೆ ಅವರ ಪೀಡನೆಯ ಜೀವಿತ ಕೊನೆಗೊಳ್ಳುವುದು ಮತ್ತು ತಮ್ಮ ಸ್ವಂತ ಸಮುದಾಯದ ಜನರ ಕಾರಣದಿಂದ ನೈಜ ನೀತಿ ಮತ್ತು ನ್ಯಾಯಪಾಲನೆ ಹಾಗೂ ಅನುಮತನೀಯವಾದ ಸ್ವಾತಂತ್ರ್ಯ ಮತ್ತು ಸಮಾನತೆಯಿಂದ ಅನುಗ್ರಹೀತವಾಗುವರು ಎಂದು ಅವರಿಗೆ ತಿಳಿಸಬೇಕು ಎಂದು ಅವರು ಹೇಳಿದರು. ಹಝ್ರತ್ ಅಬೂಬಕರ್(ರ)ರ ಯುಕ್ತಿಯಿಂದ ಮುಸ್ಲಿಮರಿಗೆ ಅಪಾರವಾದ ಪ್ರಯೋಜನ ಉಂಟಾಯಿತು. ಅವರ ವಿಜಯಗಳ ಮಾರ್ಗಗಳು ಸುಲಭವಾದುವು. ಮುಂದಕ್ಕೆ ಧಾವಿಸುವಾಗ ಹಿಂದಿನಿಂದ ದಾಳಿ ನಡೆಸಿ ಮಾರ್ಗದ ಅಡಚಣೆಯಾಗುವುದು ಎಂಬ ಭಯ ಅವರಿಗೆ ಇಲ್ಲವಾಯಿತು. (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ-267-268, ಬುಕ್ ಕಾರ್ನರ್ ಶೋರೂಮ್ ಝೇಲಮ್)

ಇದೆಲ್ಲ ತಾರೀಖ್ ತಬರಿಯ ವರದಿಗಳಾಗಿವೆ. ಹೇಗಿದ್ದರೂ ಯುದ್ಧಗಳು ನಡೆದುವು. ಯಾವುದೆಲ್ಲ ಯುದ್ಧಗಳು ನಡೆದುವು, ಅವುಗಳ ಹೆಸರುಗಳೇನು ಮತ್ತು ಅದರ ವಿಜಯಗಳ ಪ್ರಸ್ತಾಪ ಮುಂದಿನ ಬಾರಿ ಹೇಳುತ್ತೇನೆ. ಇನ್‌ಶಾ ಅಲ್ಲಾಹ್. ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲಘಟ್ಟದಲ್ಲಿ ಮುಸ್ಲಿಮರು ಇರಾನಿಯರ ವಿರುದ್ಧ ಇರಾಕಿನ ಪ್ರದೇಶಗಳಲ್ಲಿ ನಡೆಸಿದ ಯುದ್ಧಗಳು ಮತ್ತು ಅಲ್ಲಾಹನು ಅವರಿಗೆ ದಯಪಾಲಿಸಿದ ವಿಜಯಗಳ ಪ್ರಸ್ತಾಪ ಮುಂದೆ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

**********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ನಂತರ ಅವನು ಗಂಭೀರ ರೂಪದಲ್ಲಿ ರೋಧಿಸಿದನು. ಮತ್ತು ಗ್ರಂಥ ಪ್ರಕಟಣೆಯಾಗುವ ಪ್ರಮೇಯವೇ ಬರಲಿಲ್ಲ. (ಅದೇ ಉಟ 452).

ಮಸೀಹ್ ಮೌಊದ್(ಅ) ಅವರಿಗೆ ಪತ್ರ ಬರೆದ ಮಿಯಾ ಶಹಾಬುದ್ದೀನನ ಸಂಕ್ಷಿಪ್ತ ಪರಿಚಯ

ಸಯ್ಯದ್‌ನಾ ಹಝ್ರತ್ ಮಸೀಹ್ ಮಲೌಊದ್(ಅ) ಹೇಳುತ್ತಾರೆ. ನಾವು ದೋಷಮುಕ್ತತೆಯ ಸಲುವಾಗಿ ಬರೆಯಬಯಸುತ್ತೇವೆ. ಮಿಯಾ ಶಹಾಬುದ್ದೀನ್ ಅವರ ಹೆಸರು ಶೀರ್ಷಿಕೆಯಲ್ಲಿ ನಮೂದಿಸಲಾಗಿದೆ. ಇವರು ಮುಹಮ್ಮದ್ ಹಸನ್ ದಿವಂಗತರ ಮಿತ್ರರಾಗಿದ್ದಾರೆ. ಅದಲ್ಲದೇ ಆ ನತದೃಷ್ಟ ಮೃತನ ನೆರೆಯವರು ಆಗಿದ್ದಾರೆ. ಅವರ ರಹಸ್ಯಗಳೆಲ್ಲ ಇವರಿಗೆ ಗೊತ್ತು. ಅವರ ಪ್ರಯತ್ನದಿಂದಲೇ ಮೆಹರ್ ಅಲಿ ಶಾ ರವರ ಕಳ್ಳತನದ ವಿಷಯ ಬಯಲಾಯಿತು. ಮತ್ತು ಘಂಟಾಘೋಷವಾಗಿ ಸೈಫ್ ಚಿಶ್ತಿಯಾಯಿ ಗ್ರಂಥ ಕೃತಿ ಚೌರ್ಯವಾಗಿದೆ. ಅದರಲ್ಲಿ ಮಹರ್ ಅಲಿಯ ಬುದ್ಧಿವಂತಿಕೆ ಏನೇನು ಸೇರಿಲ್ಲ." (ನೂರುಝುಲುಲ್ ಮಸೀಹ್, ರೂಹಾನಿ ಖಝಾಇನ್, ನಂಪುಟ-18, ಪುಟ-450 ಟಿಪ್ಪಣಿ).

ಮಿಯಾ ಶಹಾಬುದ್ದೀನ್ ಅವರ ಎರಡು ಪತ್ರಗಳು. ಒಂದು ಮಸೀಹ್ ಮೌಊದ್(ಅ) ಅವರ ಹೆಸರಿಗೆ ಮತ್ತೊಂದು ಮೌಲಾನ ಅಬ್ದುಲ್ ಕರೀಮ್ ಸಾಹಿಬ್ ಹೆಸರಿಗೆ.

ಮಿಯಾ ಶಹಾಬುದ್ದೀನ್‌ನ ಎರಡು ಪತ್ರಗಳು ಹಝ್ರತ್ ಮಸೀಹ್ ಮೌಊದ್ (ಅ) ಇದ್ದಕ್ಕಿದ್ದಂತೆಯೇ ನುಝೂಲುಲ್ ಮಸೀಹ್‌ನಲ್ಲಿ ಪ್ರಕಟಿಸಿದ್ದಾರೆ. ಮೊದಲ ಪತ್ರದ ವಿಷಯ ವಿವರಿಸಲಾಗಿದೆ. ಇನ್ನೊಂದು ಪತ್ರದಲ್ಲಿ ಮಿಯಾ ಶಹಾಬುದ್ದೀನ್ ಒಂದು ಹೆಚ್ಚಿನ ಸಂಗತಿ ಬರೆದಿದ್ದೇನೆಂದರೆ ಗೋಲ್ಡವಿ ಅವರು ಮುಹಮ್ಮದ್ ಹಸನ್ ಭೇಸ್ ಅವರ ತಂದೆಗೆ ತಾಕೀತು ಮಾಡಿದರು. ಇಜಾಝುಲ್ ಮಸೀಹ್ ಮತ್ತು ಶಮ್ಸ್ ಬಾಝಿಗ್ಹ ನನಗೆ ತೋರಿಸುವುದು ಬೇಡವೇ ಬೇಡ ಮತ್ತು ಅದನ್ನು ಕೊಡುವುದು ಬೇಡ, ಅದರ ಮೇಲೆ ಮುಹಮ್ಮದ್ ಹಸನ್ ಅವರು ಟಿಪ್ಪಣಿ ಬರೆದಿದ್ದಾರೆ. ನಾನು ಬರುವುದನ್ನು ತಳ್ಳಿಹಾಕುವುದಿಲ್ಲ. ಆದರೆ ಪುಸ್ತಕ ಕೊಡುವುದಿಲ್ಲ. ಅದರ ಮೇಲೆ ಟಿಪ್ಪಣಿ ಇದೆ.

ಮೌಲ್ವಿ ಕರಮ್‌ದೀನ್ ಭೇಸ್ ಅವರ ಎರಡು ಪತ್ರಗಳು

ಮೌಲ್ವಿ ಕರಮ್ ದೀನ್ ಭೇಸ್ ಅವರ ಒಂದು ಪತ್ರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಹೆಸರಿಗೆ ಮತ್ತು ಇನ್ನೊಂದು ಪತ್ರ ಹಕೀಮ್ ಫಝ್ಲುಲ್ ದೀನ್ ಸಾಹಿಬ್ ಹೆಸರಿಗೆ ಇತ್ತು. ಮೊದಲ ಪತ್ರದ ಸಾರಾಂಶವೇನೆಂದರೆ, ಕರಮ್‌ದೀನ್ ಅವರು ಸಯ್ಯದ್‌ನಾ ಹಝುರತ್ ಮಸೀಹ್ ಮೌಊದ್(ಅ) ಅವರೊಂದಿಗೆ ತುಂಬಾ ಪ್ರೀತಿ ಮತ್ತು ನಿಷ್ಠೆಯನ್ನು ತೋರಿಸಿದರು. ಆದರೆ ಜೊತೆಯಲ್ಲಿ ಹೀಗೆ ಸಹ ಬರೆದರು. "ಎಲ್ಲಿಯವರೆಗೆ ನೇರವಾಗಿ ಕಾಣಲಾಗದು ಅಲ್ಲಿಯತನಕ ಬೈಅತ್ ಮಾಡುವುದು ಸರಿ ಕಾಣಿಸುವುದಿಲ್ಲ." ಮತ್ತೆ ಬರೆದರು. ಮುಹಮ್ಮದ್ ಹಸನ್ ಭೇಸ್ ಇಜಾಝುಲ್ ಮಸೀಹ್ ಮತ್ತು ಶಮ್ಸ್ ಬಾಝಿಗ್ಹ ಟಿಪ್ಪಣಿಗಳ ಮೇಲೆ ನಮ್ಮ ಅನಿಸಿಕೆಗಳನ್ನು ಬರೆದಿದ್ದರು. ಆ ಎರಡೂ ಪುಸ್ತಕಗಳು ಪೀರ್ ಸಾಹಿಬ್ ನನ್ನಿಂದ ಪಡೆದುಕೊಂಡಿದ್ದರು. ಅವು ಈಗ ಮರಳಿ ಬಂದಿವೆ. ಆ ಎರಡೂ ಗ್ರಂಥಗಳು ಮೌಲ್ವಿ ಮುಹಮ್ಮದ್ ಹಸನ್ ಸಾಹಿಬ್‌ರವರ ತಂದೆಯ ವಶದಲ್ಲಿವೆ. ಆದುದರಿಂದ ಜನಾಬರ ಸೇವೆಯಲ್ಲಿ ಆ ಗ್ರಂಥಗಳು ಕಳುಹಿಸುವುದು ಕಷ್ಟಸಾಧ್ಯ. ಏಕೆಂದರೆ ಅವರ ಅಭಿಪ್ರಾಯ ನಿಮ್ಮ ಅಭಿಪ್ರಾಯಕ್ಕೆ ವಿರೋಧವಾಗಿದೆ. ಅವರು ಯಾವತ್ತೂ ಇದಕ್ಕಾಗಿ ಅನುಮತಿ ನೀಡರು. ಪೀರ್ ಸಾಹಿಬರ ಇನ್ನೊಂದು ಪತ್ರ ನನಗೆ ಮೊನ್ನೆಯಷ್ಟೇ ತಲುಪಿದೆ. ಅದು ಇದ್ದ ಹಾಗೆಯೇ ಜನಾಬರು ನೋಡಿಕೊಳ್ಳಲು ಕಳುಹಿಸಿ ಕೊಡಲಾಗುತ್ತದೆ. ಅದರಲ್ಲಿ ಅವರು ಸ್ವಯಂ ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಮೌಲ್ವಿ ಮುಹಮ್ಮದ್ ಹಸನ್ ಅವರ ಟಿಪ್ಪಣಿಗಳು ಅವರು ಕದ್ದು ಸೈಫ್ ಚಿಶ್ತಿಯಾಯಿಯನ್ನು ಸಜ್ಜುಗೊಳಿಸಿದ್ದಾರೆ. ಆದರೆ ಇವೆಲ್ಲ ಮಾತುಗಳು ನನ್ನ ಕಡೆಯಿಂದ ಆದದ್ದು ಎಂದು ಮನವರಿಕೆ ಮಾಡಿಕೊಡುವುದು ಹಿತಕರವಲ್ಲ. ಏಕೆಂದರೆ ನಾನು ಪೀರ್ ಸಾಹಿಬರ ಜಮಾಅತ್ ನನ್ನ ಮೇಲೆ ಅಸಂತುಷ್ಟರಾಗುವುದನ್ನು ಇಷ್ಟಪಡುವುದಿಲ್ಲ. ಎರಡನೇ ಪತ್ರದ ಸಾರಾಂಶವೇನೆಂದರೆ ಮುಹಮ್ಮದ್ ಹಸನ್‌ನ ಪುತ್ರ ಹೊರಗೆ ಹೋದವನು ಮನೆ ತಲುಪಿದ್ದಾನೆ. ಅವನಿಂದ ಗ್ರಂಥಗಳು ಪಡೆಯುವ ಪ್ರಯತ್ನ ನಡೆಸಲಾಯಿತು. ಮೊದಲಂತೂ ಅವನು ಬಲವಾಗಿ ನಿರಾಕರಿಸಿದನು. ಆದರೆ ನಂತರ ಆರು ರೂಪಾಯಿ ಸಂಭಾವನೆಯ ಮೇಲೆ ರಾಜಿಯಾದನು. ಮತ್ತೆ ಬರೆದನು. "ನನ್ನ ವಿನಂತಿಯೇನೆಂದರೆ ನನ್ನ ಹೆಸರು ಕ್ರಮಶಃ ಪ್ರಕಟಿಸಬಾರದು. ಏಕೆಂದರೆ ಮತ್ತೆ ನನ್ನಿಂದ ಇಂತಹ ಸಹಾಯ ದೊರಕದು".

ಆಗ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಬರೆದರು. ಮೌಲ್ವಿ ಕರಮ್‌ದೀನ್ ಸಾಹಿಬ್ ರವರ ಭಾವನೆ ತಪ್ಪಾಗಿ ಆ ಕಡೆ ಬರಲಿಲ್ಲ ಸಾಕ್ಷಿಯನ್ನು ಮುಚ್ಚಿಡುವುದು ಘೋರ ಪಾಪವಾಗಿದೆ. ಆ ಬಗ್ಗೆ "ಆಸಿಮುನ್ ಖಲ್‌ಬುಹು" ಎಂಬುದಾಗಿ ಪವಿತ್ರ ಖುರ್‌ಆನ್‌ನಲ್ಲಿ ಎಚ್ಚರಿಕೆ ನಮೂದಿತವಾಗಿದೆ. ಆದುದರಿಂದ ಭಯಭಕ್ತಿ ಬಯಸುವವರು ಯಾರೂ ಶಾಪತಾಪಗಳನ್ನು ಲೆಕ್ಕಿಸಬಾರದು. ತಮ್ಮಲ್ಲಿ ಏನು ಸಾಕ್ಷ್ಯವಿದೆಯೋ ಅದನ್ನು ಕೊಡಬೇಕು. ಆದುದರಿಂದ ನಾವು ವಿವಶರಾಗಿದ್ದೇವೆ. ಯಾವ ಅಪರಾಧಕ್ಕೆ ಪುಷ್ಟಿ ನೀಡಿದರು. ಮತ್ತು ಮೌಲ್ವಿ ಕರಮ್‌ದೀನ್ ಸಾಹಿಬ್‌ರವರ ಈ ಅಡಗುವಿಕೆ ಅಲ್ಲಾಹನ ಆಜ್ಞೆಯಿಂದಲ್ಲ. ಕೇವಲ ಅವರ ಮನಸ್ಸಿನ ದುರ್ಬಲತೆ ಆಗಿದೆ. ಅಲ್ಲಾಹನು ಅವರಿಗೆ ಶಕ್ತಿ ನೀಡಲಿ. (ಅದೇ ಪುಟ 455).

ಮಸೀಹ್ ಮೌಊದ್(ಅ) ಅವರ ಮೇಲೆ ಕರಮ್‌ದೀನ್ ಅವರ ಪ್ರಕರಣ

ಹಝ್ರತ್ ಮಸೀಹ್ ಮೌಊದ್(ಅ) ಕರಮ್‌ದೀನ್ ಅವರ ಪತ್ರಗಳ ಜೊತೆಜೊತೆಯಲ್ಲಿ ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಅವರ ಆ ಪತ್ರ 'ನುಝೂಲುಲ್ ಮಸೀಹ್' ಇದ್ದಕ್ಕಿದ್ದಂತೆ ಪ್ರಕಟಿಸಿದರು. ಅದು ಪೀರ್ ಸಾಹಿಬ್ ಅವರು ಕರಮ್‌ದೀನ್ ಹೆಸರಿಗೆ ಬರೆದಿದ್ದರು. ಮತ್ತು

ಅದನ್ನು ಕರಮ್‌ದೀನ್ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಕಳುಹಿಸಿಕೊಟ್ಟಿದ್ದರು. ಆಗ ಕರಮ್‌ದೀನ್ ಕೋಪಗೊಂಡನು. ಮತ್ತು ಅವನ ಮಸೀಹ್ ಮೌಊದ್(ಅ) ಅವರೊಂದಿಗಿದ್ದ ನಿಷ್ಠೆಯೆಲ್ಲ ದೂರವಾಯಿತು. ಅವನು ಸಹ ಅವರ ಶತ್ರುವಾದನು ಅವನು ಎರಡು ಪ್ರಕರಣಗಳನ್ನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರ ಮೇಲೆ ಹೂಡಿದನು. ಅವರು ತಮ್ಮ ಒಂದು ಕವನ ಸಂಗ್ರಹದಲ್ಲಿ ಹೇಳಿದರು.

ಆ ಭೀಸಿನ ವ್ಯಕ್ತಿಯನ್ನು ನೋಡಿರಿ. ಕರಮ್‌ದೀನ್ ಅವನ ಹೆಸರು
ಜಗಳಕ್ಕೆ ನಿಲ್ಲಲು ತನ್ನ ನಿದ್ರೆಯನ್ನು ಸಹ ಬಿಟ್ಟುಬಿಟ್ಟನು.
ಅವನಿಗೆ ಸಹಾಯ ಮಾಡಲು ಜನರಲ್ಲಿ ಉತ್ಸಾಹವಿತ್ತು.
ಅವನ ಶತ್ರುಗಳು ಅವನಿಗೆ ನ್ಯೂನತೆ ಮುಚ್ಚುವವ ಎಂದು ಭಾವಿಸಿದ್ದರು.
ಅವನ ಮಿತ್ರರೆಲ್ಲರೂ ದುಷ್ಕರ್ಮಿಗಳಾದರು ದಾರಿತಪ್ಪಿದರು.
ಅವನಿಗೆ ನೆರವು ನೀಡಲು ಮೌಲ್ವಿಗಳು ಬಂದಿದ್ದರು.
ಅವರಲ್ಲಿ ಮುನ್ನುಗ್ಗಿ ಆವೇಶಭರಿತರಾಗಿ ಬರುವವರಾಗಿದ್ದರು.
ತನ್ನ ವಿವರ ಬರೆಸಲು ಚಮತ್ಕಾರಿಯಾಗಿದ್ದರು.
ದಾವೆದಾರನು ಸಹ ತನ್ನ ಚತುರತೆ ತೋರಿಸುತ್ತಿದ್ದನು.
ನೂರಾರು ವಿರೋಧಬಾಸ ಘಟನೆ ಸೃಷ್ಟಿಸುತ್ತಿದ್ದರು.
ಆದರೆ ತನ್ನ ದುಷ್ಕರ್ಮದ ಫಲ ಅವನು ಪಡೆದನು.
ಅಲ್ಲದೇ ಅವನ ಹೆಸರು ಸುಳ್ಳುಗಾರ ಎಂದು ಕರೆದರು.
ಸುಳ್ಳುಗಾರ ಎಂಬ ಹೆಸರು ಕಡತದಲ್ಲಿ ಉಳಿಯಿತು.
ಚತುರತೆಯ ಅಹಂಭಾವ ಅವನ ದೂರವಾಯಿತು.

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಎರಡೂ ಪ್ರಕರಣಗಳಲ್ಲಿ ಸಮಯಕ್ಕಿಂತ ಮುಂಚೆಯೇ ಮುಕ್ತರಾಗುವ ಸುವಾರ್ತೆ ನೀಡಿದ್ದನು. ಅವರು ಚಶ್ಮ ಮಾರಿಫತ್ ರೂಹಾನಿ ಖಝಾಯನ್ ಸಂಪುಟ 23 ಪುಟ 263 ರಲ್ಲಿ ಹೇಳಿದ್ದನು. “ಹಝ್ರತ್ ರಸೂಲುಲ್ಲಾಹ್(ಸ) ಅವರ ಮೇಲೆ ಐದು ಸಲ ಅತ್ಯಂತ ಪರೀಕ್ಷೆಯ ಕಾಲ ಬಂದಿತ್ತು. ಅದರಲ್ಲಿ ಅವರ ಜೀವಂತವಾಗಿ ಉಳಿಯುವುದೇ ಕಷ್ಟಸಾಧ್ಯ ಎಂದು ಭಾವಿಸಲಾಗಿತ್ತು ಮತ್ತು ಹೇಳಿದರು. “ಇದೊಂದು ವಿಚಿತ್ರ ಕಾಕತಾಳಿಯವಾಗಿದೆ. ನನಗೂ ಸಹ ಐದು ಸಂದರ್ಭಗಳು ಕಷ್ಟಕರವಾಗಿ ಎದುರುಗೊಂಡಿದೆ. ಅದರಲಿ ಮಾನ ಮತ್ತು ಜೀವಕ್ಕೆ ಅಪಾಯಬಂದಿತ್ತು. ಅದರಲ್ಲಿ ಎರಡು ಸಂದರ್ಭಗಳು ಇವೇ ಆಗಿದ್ದವು ಅಂದರೆ ಕರಮ್‌ದೀನಿನ ಎರಡು ಪ್ರಕರಣಗಳು, ಅವನು ಅದನ್ನು ಜಿಹಲುಮ್ ನ್ಯಾಯಾಲಯದಲ್ಲಿ ಹೂಡಿದ್ದನು ಆದರೆ ಎರಡನೆಯ ಪ್ರಕರಣ ನಂತರ ಸ್ಥಳಾಂತರಗೊಂಡು ಗುರುದಾಸಪುರ ನ್ಯಾಯಾಲಯಕ್ಕೆ ಸೇರಿತು ಗುರುದಾಸಪುರದ ಮ್ಯಾಜಿಸ್ಟ್ರೇಟ್ ಒಬ್ಬ ಕಟ್ಟರವಾದಿ ಆರ್ಯ ಲಾಲ ಚಂದುಲಾಲ್ ಎಂಬುವವನಾಗಿದ್ದನು. ಅವನು ಅವರ ಶತ್ರುತ್ವಕ್ಕೆ ಮುಂದಾದನು. ಶತಾಯಗತಾಯ ಅವರಿಗೆ ಶಿಕ್ಷೆ ನೀಡಲು ಬಯಸುತ್ತಿದ್ದನು. ಆದರೆ ಅಲ್ಲಾಹನು ಅವನ ಒಂದನ್ನು ಸಹ ನಡೆಯಗೊಡಲಿಲ್ಲ. ಈ ಪ್ರಕರಣದಲ್ಲಿ ಮೌಲ್ವಿ ಸನಾವುಲ್ಲಾ ಅಮೃತ್ಸರಿ ಸಹ ಕರಮ್‌ದೀನ್ ಪರವಾಗಿ ಸಾಕ್ಷಿಯಾಗಿ ಬಂದಿದ್ದನು. ಮತ್ತು ಸಾಕ್ಷ್ಯ ಕೊಟ್ಟನು. “ನಾನು ದಾವೆದಾರನಿಗೆ ಜ್ಞಾನಿ, ಮೌಲ್ವಿ ಮತ್ತು ಮುಸಲ್ಮಾನರ ನೇತಾರ ಎಂದು ಭಾವಿಸುತ್ತೇನೆ. ಲಯೀಮ್ ಎಂಬುದು ಅತ್ಯಂತ ಕೀಳು ಪದವಾಗಿದೆ. ಲಾಲಚಂದೂಲಲ್ ಹಝ್ರತ್ ಮಸೀಹ್ ಮೌಊದ್(ಅ) ರವರ ಮಾನದ ಮೇಲೆ ಕೈಹಾಕಲು ಪೂರ್ಣ ಸಿದ್ಧತೆ ಮಾಡಿಕೊಂಡಿದ್ದನು. ತಕ್ಕ ಸಮಯದಲ್ಲಿ ಸರಕಾರ ಕೆಲ ಕಾರಣಗಳಿಂದಾಗಿ ಅವರಿಗೆ ಹಿನ್ನಡೆಗೊಳಿಸಿ ಮುಲ್ತಾನಕ್ಕೆ ಕಳುಹಿಸಿದರು. ಚಂದೂಲಾಲ್ ಬದಲಿಗೆ ಆತ್ಮರಾಮ್ ಮ್ಯಾಜಿಸ್ಟ್ರೇಟ್ ಆಗಿ ನಿಯುಕ್ತಗೊಂಡನು. ಅವನು ಚಂದೂಲಾಲನಿಗಿಂತ ಹೆಚ್ಚು ಅಪಾಯಕರನಾಗಿ ಪರಿಣಮಿಸಿದನು. ಅವನು ಒಂದು ಷಡ್ಯಂತರ ರಚಿಸಿದನು. ಶನಿವಾರ ದಿನ ನ್ಯಾಯಾಲಯ ಮುಕ್ತಾಯಗೊಳ್ಳುವ ಸ್ವಲ್ಪ ಸಮಯ ಮುಂಚೆಯೇ ತೀರ್ಪು ನೀಡಬೇಕು ಮತ್ತು ದೊಡ್ಡ ಮೊತ್ತದ ದಂಡ ಪೂರೈಸದೇ ಇರುವ ಸಂದರ್ಭ ಕನಿಷ್ಠ ಎರಡು ದಿನಗಳಾದರೂ ಸೆರೆವಾಸ ವಿಧಿಸಬೇಕು. ಅವನು ಹಾಗೆಯೇ ಮಾಡಿದನು. ಆದರೆ ತೀರ್ಪು ನೀಡುತ್ತಿದ್ದಂತೆ ಆತ್ಮರಾಮನ ಪ್ರಾಣವೇ ಹಾರಿಹೋದಂತಾಯಿತು. ಲಾಲ ಆತ್ಮರಾಮನ ಮೇಲೆ ಅಲ್ಲಾಹನ ಶಾಪ ಯಾವ ರೀತಿ ಎರಗಿದೆ ಎಂದರೆ ಅವನ ಇಬ್ಬರು ಪುತ್ರರು ಒಂದರ ನಂತರ ಇನ್ನೊಂದರಂತೆ ಒಂದೇ ತಿಂಗಳಿನಲ್ಲಿ ಮರಣ ಹೊಂದಿದರು. ಹೀಗೆ ಆತ್ಮರಾಮನ ಮನೆಯಲ್ಲಿ ಸೂತಕ ಬಂದೆರಗಿತು. ಆತ್ಮರಾಮನು ಅದೇ ದುಃಖದಲ್ಲಿ ಅರೆಹುಚ್ಚನಂತಾದನು.

7 ಜನವರಿ 1905 ರಂದು Divisional ಜಡ್ಜ್ ಅಮೃತ್ಸರ ಎ.ಇ. ಹರಿ ಸಾಹಿಬ್ ಅವರು ಕರಮ್‌ದೀನ್‌ರ ಬಗ್ಗೆ ತೀರ್ಪು ನೀಡಿದರು ದಾವೆದಾರನು ಸುಳ್ಳುಗಾರ ಮತ್ತು ಶಾಪಗ್ರಸ್ಥ ಇತ್ಯಾದಿ ಪದಗಳಿಗೆ ಅರ್ಹನಾಗಿದ್ದ. ಆದ್ದರಿಂದ ಸಾರ್ವಜನಿಕರು ಅಂದಾಜಿಸಬಹುದು. ದಾವೆದಾರನ ನುಡಿ ಮತ್ತು ನಡೆ ಯಾವ ರೀತಿಯಾಗಿದ್ದವು ಎಂದು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಹಕೀಮ್ ಫಝಲ್ ದೀನ್ ಸಾಹಿಬ್‌ರವರ ಕುರಿತು ಬರೆದರು. ಅವರು ದೋಷಮುಕ್ತರಾಗಿರುವರು. ಆದುದರಿಂದ ಅವರ ದಂಡರೂಪದ ಹಣವನ್ನು ಮರಳಿಸಿರಿ. (ತಾರೀಖ್ ಅಹ್ಮದಿಯತ್, ಸಂಪುಟ-2, ಪುಟ-294)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಂದು ಕವನದಲ್ಲಿ ಹೇಳಿದರು.

ಕರಮ್ ದೀನ್ ಸಹ ನಿಮ್ಮ ದೃಷ್ಟಿಯಲ್ಲಿ ಭಯಭಕ್ತಿಯುಳ್ಳವನಾಗಿದ್ದನು.
ವಿನಾಕಾರಣ ಅವನು ನನ್ನ ಮೇಲೆ ದೌರ್ಜನ್ಯ ಎಸಗಿದನು.
ಅಸಹಾಯಕ ನಾನಾಗಿರಲಿಲ್ಲ, ದೇವಾನುಗ್ರಹ ನನ್ನ ಜೊತೆಗಿತ್ತು.
ವಿಜಯದ ಸುವಾರ್ತೆ ನೀಡಿದ್ದನು. ದಿವ್ಯವಾಣಿ ಮೂಲಕ ಹಲವಾರು ಸುಳ್ಳುಗಾರ
ಎಂದು ಹೆಸರು ಅವ ಕಡತದಲ್ಲಿ ಉಳಿಯಿತು.
ಅಂತ್ಯ ದಿನದವರೆಗೆ ಈ ಹೆಸರು ಅಳಿಸಲಾಗದು.

ಕರಮ್ ದೀನನ ಮೊದಲ ಪ್ರಕರಣ ನೆಲೆಯಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಜೆಹಲುಮಿನ ಪ್ರವಾಸ ಕೈಗೊಂಡಿದ್ದರು. ಆ ಕುರಿತು ಅವರು ನುಡಿಯುತ್ತಾರೆ. 1904 ರಲ್ಲಿ ನಾನು ಕರಮದೀನಿನ ಪ್ರಕರಣದಿಂದಾಗಿ ಜೆಹಲುಮ್ ಹೋಗುತ್ತಿದ್ದೆ. ರಸ್ತೆಯಲ್ಲಿ ನನಗೆ ದಿವ್ಯವಾಣಿಯಾಯಿತು. **ಉರೀಕ ಬರಕಾತಿಮ್ ಮಿನ್ ಕುಲ್ಲಿ ತರಫಿನ್** ಅಂದರೆ “ಎಲ್ಲ ರೀತಿಯಿಂದ ನಾನು ನಿನಗೆ ಕರುಣಿಸುವೆನು.” ಈ ದಿವ್ಯವಾಣಿ ಜವಾಅತಿನಲ್ಲಿ ಅದೇ ಸಮಯಕ್ಕೆ ಅರುಹಿಸಲಾಗಿತ್ತು. ಬದಲು ಅಲ್‌ಹಕಮ್‌ನಲ್ಲಿ ನಿಗಧಿಪಡಿಸಿ ಪ್ರಕಟಿಸಲಾಗಿತ್ತು. ಮತ್ತು ಈ ಭವಿಷ್ಯವಾಣಿ ಅದೇ ರೀತಿ ಪೂರ್ಣಗೊಂಡಿತು. ನಾನು ಜೆಹಲುಮ್ ಸಮೀಪ ತಲುಪಿದಾಗ ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚು ಜನರು ನನಗೆ ಭೇಟಿ ಮಾಡಲು ಬಂದರು. ಎಲ್ಲ ರಸ್ತೆಗಳ ಮೇಲೆ ಮನುಷ್ಯ ಜಂಗಳಿಯೇ ಇತ್ತು. ಆದರೂ ಎಂತಹ ವಿನಯದ ಅವಸ್ಥೆಯಲ್ಲಿದ್ದರು ಎಂದರೆ, ಸಾಷ್ಟಾಂಗ ಪ್ರಣಾಮದಲ್ಲಿ ಮಗ್ನರಾಗಿದ್ದರು. ಮತ್ತೆ ಜಿಲ್ಲಾ ಕಚೇರಿಯ ಸುತ್ತಮುತ್ತ ಎಲ್ಲೆಲ್ಲೂ ಎಷ್ಟೊಂದು ಜನರಿದ್ದರು ಎಂದರೆ ಸರಕಾರದ ಅಧಿಕಾರಿಗಳು ಅಚ್ಚರಿಗೊಂಡರು. ಹನ್ನೊಂದು ನುರು ಜನರು ಬೈಅತ್ ಮಾಡಿದರು ಮತ್ತು ಸುಮಾರು ಎರಡೂ ನೂರು ಮಹಿಳೆಯರು ಬೈಅತ್ ಮಾಡಿ ಈ ಸಂಘಟನೆಗೆ ಸೇರಿದ್ದರು. ನನ್ನ ಮೇಲಿದ್ದ ಕರ್‌ದೀನಿನ ಪ್ರಕರಣ ವಜಾಗೊಳಿಸಲಾಯಿತು. ಹಲವಾರು ಜನರು ನಿಷ್ಠೆಯಿಂದ ವಿನಯದಿಂದ ಪಾರಿತೋಷಕಗಳನ್ನು ನೀಡಿದರು. ಹೀಗೆ ನಾವು ಒಂದೆಡೆಯಿಂದ ಕಾರುಣ್ಯಗಳಿಂದ ಅನುಗ್ರಹಿತರಾಗಿ ಖಾದಿಯಾನ್ ಮರಳಿದೆವು. ಅಲ್ಲಾಹನು ಅತ್ಯಂತ ಸುಸ್ಪಷ್ಟ ರೀತಿಯಲ್ಲಿ ಆ ಭವಿಷ್ಯವಾಣಿ ಪೂರ್ಣಗೊಳಿಸಿದನು. (ಹಖೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ-22, ಪುಟ-263)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಬಹುಮಾದ ಪಂಥ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು. (ಮನ್ಸೂರ್ ಅಹ್ಮದ್ ಮಸ್ರೂರ್).

****************

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು “ಹಕಮ್” ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು “ಮುಹೈಮಿನ್” ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

**ಇಂದು, ವಿಜ್ಞಾನವು ಮಗುವಿನ ಕಿವಿಗಳು ಮೊದಲು ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ, ನಂತರ ಕಣ್ಣುಗಳು ಮತ್ತು ಅಂತಿಮವಾಗಿ ಬುದ್ಧಿಶಕ್ತಿಯು ಕಾರ್ಯ ನಿರ್ವಹಿಸಲು ಪ್ರಾರಂಭಿಸುತ್ತದೆ ಎಂದು ಸಾಬೀತುಪಡಿಸಿದೆ.**
**ಈ ವ್ಯವಸ್ಥೆಯು ಪವಿತ್ರ ಖುರ್‌ಆನ್‌ನ ದೈವಿಕ ಪದದ ಪುರಾವೆಯಾಗಿದೆ ಏಕೆಂದರೆ ಅದು ಆ ಸಮಯದಲ್ಲಿ ಅಡಗಿರುವ ವಿಷಯಗಳನ್ನು ವಿವರಿಸುತ್ತದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ನಹಲ್ ಆಯತ್ 79 **ವಲ್ಲಾಹು ಅಖ್ರಜಕುಮ್ ಮಿಮ್ ಬುತೂನಿ ಉಮ್ಮಹಾತಿಕುಮ್ ಲಾ ತಅ್‌ಲಮೂನ ಶೈಅ; ವಜಅಲ ಲಕುಮುಸ್ಸಮ್‌ಅ ವಲಬ್ಸಾರ ವಲ್‌ಅಫ್‌ಇದಃ; ಲಅಲ್ಲಕುಮ್ ತಶ್‌ಕುರೂನ್** ನ ವ್ಯಾಖ್ಯಾನಿಸುತ್ತ ಹೇಳುತ್ತಾರೆ:

ಓ ಜನರೇ, ನಾವು ನಿಮ್ಮನ್ನು ನಿಮ್ಮ ತಾಯಂದಿರ ಗರ್ಭದಿಂದ ಜಗತ್ತಿಗೆ ಕಳುಹಿಸಿದ್ದೇವೆ, ನಿಮಗೆ ಏನೂ ತಿಳಿದಿರಲಿಲ್ಲ, ನಿಮಗೆ ಕಣ್ಣು, ಕಿವಿ ಮತ್ತು ಹೃದಯಗಳನ್ನು ನೀಡಿ ಲೋಕಕ್ಕೆ ಕಳುಹಿಸಲಾಯಿತು ಇದರಿಂದ ನೀವು ಜ್ಞಾನವನ್ನು ಕಲಿಯುತ್ತೀರಿ, ಆದರೆ ನೀವು ನಮ್ಮ ಈ ಕರುಣೆಯಿಂದ ಪ್ರಯೋಜನ ಪಡೆಯಲಿಲ್ಲ. ಕಣ್ಣುಗಳಿಂದ ನೋಡಲಿಲ್ಲ, ಕಿವಿಯಿಂದ ಕೇಳಲಿಲ್ಲ, ಹೃದಯದಿಂದ ಯೋಚಿಸಲಿಲ್ಲ. ಈ ಪದಗುಚ್ಛದಲ್ಲಿ ಎಂತಹ ಕರುಣೆ ಮತ್ತು ಚಿಂತೆ ತುಂಬಿದೆ. ಸರ್ವಶಕ್ತನಾದ ಅಲ್ಲಾಹನು ತನ್ನ ದಾಸರ ನಿರ್ಲಕ್ಷ್ಯದ ಬಗ್ಗೆ ಹೇಗೆ ದುಃಖಿಸುತ್ತಾನೆ ಅದು ಅವರನ್ನು ಪ್ರೀತಿಯ ಮಾತುಗಳಲ್ಲಿ ಶಿಕ್ಷೆಗೆ ಅರ್ಹರನ್ನಾಗಿ ಮಾಡಿದೆ.

ಈ ಆಯತ್‌ನ ಸಂಬಂಧ ಸೂರತ್‌ನ ವಿಷಯಕ್ಕೆ ಏನೆಂದರೆ: ಅದರಲ್ಲಿ ದೈವಿಕ ಸ್ಫೂರ್ತಿಯ (ಇಲ್‌ಹಾಮ್) ಅಗತ್ಯತೆಗಾಗಿ ಮತ್ತೊಂದು ಪುರಾವೆಯನ್ನು ನೀಡಲಾಗಿದೆ ಮತ್ತು ಮಗು ಜನಿಸಿದಾಗ, ಅವನು ಎಲ್ಲಾ ಜ್ಞಾನದಿಂದ ದೂರವಿರುತ್ತಾನೆ, ಆದರೆ ಸರ್ವಶಕ್ತನಾದ ಅಲ್ಲಾಹನು ಅವನಿಗೆ ಕಣ್ಣು, ಕಿವಿ ಮತ್ತು ಹೃದಯವನ್ನು ನೀಡಿ ಸೃಷ್ಟಿಸುತ್ತಾನೆ, ಇದರಿಂದ ಅವನು ಜ್ಞಾನವನ್ನು ಪಡೆಯುತ್ತಾನೆ ಮತ್ತು ಅದರ ಸಹಾಯದಿಂದ ಅವನು ಜ್ಞಾನವನ್ನು ಕಲಿಯುತ್ತಾನೆ. ಹೀಗೆ ಒಬ್ಬ ವ್ಯಕ್ತಿಯು ಕಲಿಯುವ ಲೌಕಿಕ ಜ್ಞಾನಗಳನ್ನು ಅವನು ಅಲ್ಲಾಹನು ಒದಗಿಸಿದ ಮೂಲಗಳಿಂದ ಕಲಿಯುತ್ತಾನೆ. ಜ್ಞಾನವನ್ನು ಸಂಪಾದಿಸಲು ನನಗೆ ಅಲ್ಲಾಹನು ನೀಡಿದ ಈ ಸಾಧನಗಳು ಬೇಕಾಗಿಲ್ಲ ಎಂದು ಹೇಳುವ ಯಾವ ವ್ಯಕ್ತಿಯೂ ಇಲ್ಲ. ಹಾಗಾದರೆ ಆಧ್ಯಾತ್ಮಿಕ ಜ್ಞಾನವನ್ನು ಕಲಿಯಲು ಅಲ್ಲಾಹನು ಸೃಷ್ಟಿಸುವ ಸಾಧನಗಳನ್ನು ಬಳಸಲು ಅವನು ಏಕೆ ನಿರಾಕರಿಸುತ್ತಾನೆ.

ಮಾನವನ ಎಲ್ಲಾ ಶ್ರೇಷ್ಠತೆಯು ಅವನಿಗೆ ಶಕ್ತಿ ನೀಡುವ ಸಾಧನಗಳ ಬಳಕೆಯಿಂದ ಬರುತ್ತದೆ ಎಂಬುದು ಆಶ್ಚರ್ಯಕರವಾಗಿದೆ. ಮಾನವನು ಎಷ್ಟು ಸಾಧನೆಗಳನ್ನು ಹೊಂದಿದ್ದರೂ, ಅವು ಶಕ್ತಿಗಳ ಸಹಾಯದಿಂದ ಪಡೆಯಲ್ಪಡುತ್ತವೆ ಮತ್ತು ಈ ಶಕ್ತಿಗಳ ಬಳಕೆಯಲ್ಲಿ ಅವನು ಯಾವುದೇ ದೌರ್ಬಲ್ಯವನ್ನು ಅನುಭವಿಸುವುದಿಲ್ಲ. ಆದರೆ ಆಧ್ಯಾತ್ಮಿಕ ಸಾಧನಗಳ ಪ್ರಶ್ನೆ ಉದ್ಭವಿಸಿದಾಗ, **"**ನನಗೆ ಅವುಗಳ ಅವಶ್ಯಕತೆ ಇದೆಯೇ? ನನ್ನ ಕೆಲಸವನ್ನು ನಾನು ಸ್ವತಃ ಮಾಡಬಲ್ಲೆ, ಆದರೆ, ಭೌತಿಕ ಪ್ರಗತಿಗೆ ನೀಡಿದ ಮಾರ್ಗಗಳು ಅವನಿಗೆ ಅಗತ್ಯವಿರುವಂತೆ, ಆಧ್ಯಾತ್ಮಿಕ ಸಾಧನೆಗಾಗಿ ಅಲ್ಲಾಹನು ತನ್ನ ಪರಿಪೂರ್ಣ ಬುದ್ಧಿವಂತಿಕೆಯಿಂದ ಅವನನ್ನು ಸೃಷ್ಟಿಸಿದ್ದಾನೆ ಈ ವಸ್ತುಗಳು ಬೇಕಾಗಿರುತ್ತದೆ.

ಆಯತ್‌ನ ಕೊನೆಯಲ್ಲಿ ಸೂಚಿಸಿರುವುದೇನೆಂದರೆ: ಈ ವಸ್ತುಗಳನ್ನು ನೀಡುವ ಉದ್ದೇಶವು ಅಲ್ಲಾಹನ ಅನುಗ್ರಹದ ಮೌಲ್ಯವು ನಿಮ್ಮಲ್ಲಿ ಉದ್ಭವಿಸಬೇಕು. ಇದಕ್ಕೆ ವಿರುದ್ಧವಾಗಿ, ನೀವು ಈ ಶಕ್ತಿಗಳ ಬಗ್ಗೆ ಹೆಮ್ಮೆಪಡುತ್ತೀರಿ ಮತ್ತು ನಮಗೆ ಯಾವುದೇ ಬಾಹ್ಯ ಸಹಾಯ ಅಗತ್ಯವಿಲ್ಲ ಎಂದು ಹೇಳುತ್ತೀರಿ.

ಈ ಆಯತ್‌ನಲ್ಲಿ, ಕಿವಿಗಳ ನಂತರ ಕಣ್ಣುಗಳು ಮತ್ತು ಕಣ್ಣುಗಳ ನಂತರ ಹೃದಯಗಳನ್ನು ಉಲ್ಲೇಖಿಸಲಾಗಿದೆ ಮತ್ತು ಅದೇ ಕ್ರಮದಲ್ಲಿ ಈ ಅಂಗಗಳು ಮಾನವ ಜ್ಞಾನದ ಹೆಚ್ಚಳಕ್ಕೆ ಕಾರಣವಾಗುತ್ತವೆ. ಮಗುವಿನ ಕಿವಿಗಳು ಮೊದಲು ಕೆಲಸ ಮಾಡುತ್ತವೆ. ಅದರ ನಂತರ ಕಣ್ಣುಗಳು ಮತ್ತು ತದನಂತರ ಹೃದಯ ಅಂದರೆ ಬೌದ್ಧಿಕ ಶಕ್ತಿಯು ಕೆಲಸ ಮಾಡುತ್ತದೆ. ಇಂದು ವಿಜ್ಞಾನವು ಮೊದಲು ಮಗುವಿನ ಕಿವಿ ಕೆಲಸ ಮಾಡಲು ಪ್ರಾರಂಭಿಸುತ್ತದೆ ಮತ್ತು ನಂತರ ಕಣ್ಣುಗಳು ಕೆಲಸ ಮಾಡಲು ಪ್ರಾರಂಭಿಸುತ್ತದೆ ಮತ್ತು ಅಂತಿಮವಾಗಿ ಬೌದ್ಧಿಕ ಶಕ್ತಿಯು ಕೆಲಸ ಮಾಡಲು ಪ್ರಾರಂಭಿಸುತ್ತದೆ ಎಂದು ಸಾಬೀತುಪಡಿಸಿದೆ. ಆದ್ದರಿಂದ, ಪ್ರಾಣಿಗಳಲ್ಲಿ, ಮಕ್ಕಳ ಕಣ್ಣುಗಳು ಕೆಲವೊಮ್ಮೆ ಹಲವಾರು ದಿನಗಳ ನಂತರ ತೆರೆದುಕೊಳ್ಳುತ್ತವೆ. ಈ ಅವಧಿಯಲ್ಲಿ ಕಿವಿಗಳು ಮಾತ್ರ ಕೆಲಸ ಮಾಡುತ್ತಿರುತ್ತವೆ. ಮಾನವ ಮಕ್ಕಳ ಕಣ್ಣುಗಳು ನಿಸ್ಸಂಶಯವಾಗಿ ತೆರೆದಿರುತ್ತವೆ, ಆದರೆ ಅದರ ಕಾರ್ಯವು ಕಿವಿಗಳ ಕಾರ್ಯದ ನಂತರ ಪ್ರಾರಂಭವಾಗುತ್ತದೆ ಮತ್ತು ಬೌದ್ಧಿಕ ಶಕ್ತಿಯು ಸ್ವಲ್ಪ ಸಮಯದ ನಂತರ ಕೆಲಸ ಮಾಡಲು ಪ್ರಾರಂಭಿಸುತ್ತದೆ. ಈ ವ್ಯವಸ್ಥೆಯು ಪವಿತ್ರ ಖುರ್‌ಆನ್‌ನ ದೈವಿಕ ಪದದ ಪುರಾವೆಯಾಗಿದೆ ಏಕೆಂದರೆ ಅದು ಆ ಕಾಲದಲ್ಲಿ ಅಡಗಿರುವ ವಿಷಯಗಳನ್ನು ವಿವರಿಸುತ್ತದೆ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-208, ಪ್ರಕಟಿತ 2010 ಖಾದಿಯಾನ್)**

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಅಲೈಹಿಸ್ಸಲಾಮ್ ಮತ್ತು ಅವರ ಖಲೀಫರಲ್ಲಿ ನೋಡುತ್ತೇವೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ)ರವರ ಒಂದು ಬಾರಿಯ ಕ್ರಿಯೆಯನ್ನು ಹೊರತುಪಡಿಸಿ, ಅವರು ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ) ಅವರ ಅದೇ ವರದಿಯನ್ನು ಅನುಸರಿಸಿದಾಗ, ಅವರು ಈದ್ ನಮಾಝನ್ನು ನಿರ್ವಹಿಸಿದ ನಂತರ ಜುಮುಅ ಅಥವಾ ಝುಹರ್ ನಮಾಝನ್ನು ನಿರ್ವಹಿಸಲಿಲ್ಲ.

ಆದರೆ ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ) ಅವರ ಈ ವರದಿಯು ಪವಿತ್ರ ಪ್ರವಾದಿ(ಸ) ಮತ್ತು ಅವರ ಖಲೀಫರ ಯಾವುದೇ ಮಾತುಗಳು ಅಥವಾ ಕಾರ್ಯಗಳನ್ನು ಆಧರಿಸಿಲ್ಲ, ಆದ್ದರಿಂದ ಈ (ಮಖ್ಫೂ) ವಿಘಟಿತ ವರದಿಯಿಂದಾಗಿ, ಇದು ವರದಿಗಾರರ ವರದಿಯಲ್ಲಿ ವಿರೋಧಾಭಾಸಗಳನ್ನು ಹೊಂದಿದೆ, ಕಡ್ಡಾಯ ನಮಾಝ್ ಕೈಬಿಡಲಾಗುವುದಿಲ್ಲ. ಆದ್ದರಿಂದ, ಫಿಖ ಅಹ್ಮದೀಯದಿಂದ (ನ್ಯಾಯಶಾಸ್ತ್ರದಿಂದ) ಈ ವರದಿಯನ್ನು ಆಧರಿಸಿದ ಭಾಗವನ್ನು ಅಳಿಸಿ ಮತ್ತು ಫಿಖ ಅಹ್ಮದೀಯ (ನ್ಯಾಯಶಾಸ್ತ್ರ) ದಲ್ಲಿ ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝಿನ ನಂತರ, ಜುಮುಅದ ನಮಾಝನ್ನು ಸಲ್ಲಿಸದಿದ್ದರೆ, ಅದರ ಸಮಯದಲ್ಲಿ ಝುಹರ್ ನಮಾಝನ್ನು ನಿರ್ವಹಿಸಬೇಕು ಎಂದು ಬರೆಯಿರಿ. **(ಮುಂದುವರಿಯುವುದು)**

## ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ." *(ಕಿಶ್ತಿ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)*

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಈದ್ ಮತ್ತು ಜುಮುಅ ಒಂದೇ ದಿನ ಬಂದರೆ, ಅದರ ಬಗ್ಗೆ**

ಪ್ರವಾದಿ ಮುಹಮ್ಮದ್(ಸ)ರ ಸುನ್ನತ್ ಮತ್ತು ಖುಲಫಾ ಎ ರಾಶಿದೀನ್ ಹಾಗೂ ಪ್ರವಾದಿ(ಸ) ಅವರ ಸಹಾಬರವರ ನಂಬಿಕೆಯು ಹೀಗಿತ್ತು ಅಂದರೆ ಅವರೆಲ್ಲರೂ ಅಂದು ಈದ್ ನಮಾಝ್ ನಿರ್ವಹಿಸಿದ ನಂತರ ಜುಮುಅದ ನಮಾಝನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಿದರು.

ಹಾಗೂ ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಅದ ನಮಾಝಿನಲ್ಲಿ ಬಿಡುವು ನೀಡಿ, ಅವರವರ ಪ್ರದೇಶದಲ್ಲೇ ಝುಹರ್ ನಮಾಝನ್ನು ನಿರ್ವಹಿಸುವಂತೆ ಸೂಚನೆ ನೀಡಿದರು.

**ಆದ್ದರಿಂದ, ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝ್ ನಿರ್ವಹಿಸಿದ ನಂತರ ಒಂದು ವೇಳೆ ಜುಮುಅ ನಮಾಝ್ ನಿರ್ವಹಿಸದಿದ್ದರೆ ಝುಹರ್ ನಮಾಝನ್ನು ಅದರ ಸಮಯದಲ್ಲಿ ನಿರ್ವಹಿಸಬೇಕು.**

---

ನಮಾಝ್ ಮತ್ತು ಉಪವಾಸವು ಆರಾಧನೆಯ ಭೌತಿಕ ಕ್ರಿಯೆಗಳಾಗಿವೆ, ಆದ್ದರಿಂದ ಅವರ ಪ್ರತಿಫಲವು ಈ ಆರಾಧನೆಯ ಕಾರ್ಯಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ.

ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ

ಆದಾಗ್ಯೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವನ್ನು ನೀಡುವ ಏನನ್ನಾದರೂ ಕೆಲಸ ಮಾಡಿದರೆ ಅದು ಸದಖ ಜಾರಿಯ ಎಂದು ಪರಿಗಣಿಸಲಾಗುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

ಹದೀಸ್ ಗ್ರಂಥಗಳಲ್ಲಿ, ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಸತ್ತವರ ಪರವಾಗಿ ಉಪವಾಸ ಮಾಡ ಬೇಡಿ ಎಂಬ ವರದಿಗಳು ದೊರೆಯುತ್ತದೆ ಆದರೆ ಅವರ ಪರವಾಗಿ ಆಹಾರ ತಿನ್ನಿಸಿರಿ ಎಂಬ ಉಲ್ಲೇಖಗಳಿವೆ.

## ಸಯ್ಯಿದುನಾ ಹಝ್ರತ್ ಅಮೀರುಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ಕೇಳಲಾದ ಪ್ರಶ್ನೆಗಳಿಗೆ ವಿಶ್ವಾಸ ವರ್ಧಕ ಉತ್ತರಗಳ

**ಗಮನಿಸಿ:** ಸಯ್ಯಿದುನಾ ಹಝ್ರತ್ ಅಮೀರಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ವಿವಿಧ ಸಂದರ್ಭಗಳಲ್ಲಿ ಪತ್ರಗಳಲ್ಲಿ ಹಾಗೂ ಎಂ.ಟಿ.ಎ ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಸಮಸ್ಯೆಗಳ ಬಗ್ಗೆ ಕೇಳಲಾದ ಪ್ರಶ್ನೆಗಳ ಬಗ್ಗೆ ನೀಡಿದ ಮಾರ್ಗದರ್ಶನ ಹಾಗೂ ಉತ್ತರಗಳನ್ನು ಓದುಗರ ಅನುಕೂಲಕ್ಕಾಗಿ ಅಲ್-ಫ಼ಜಲ್ ಇಂಟರ್ನ್ಯಾಷನಲ್‌ಗೆ ಧನ್ಯವಾದಗಳೊಂದಿಗೆ ಪ್ರಕಟಿಸಲಾಗುತ್ತಿದೆ. (ಸಂಸ್ಥೆ)

**ಪ್ರಶ್ನೆ:** ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಅರಬ್ ಮಹಿಳೆಯೊಬ್ಬರು ಬರೆದಿದ್ದಾರೆ, ಮಹಿಳೆಯರಿಗೆ ಹುಬ್ಬು ಮತ್ತು ದೇಹದ ಮೇಲೆ ಹಚ್ಚೆ ಹಾಕುವ ವ್ಯವಹಾರವನ್ನು ಮಾಡಲು ಅನುಮತಿ ಇದೆಯೇ? ಎಂದು ಅವರಿಗೆ ಮಹಿಳೆಯೊಬ್ಬರು ಕೇಳಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಅವರು 27ನೇ ಏಪ್ರಿಲ್ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ:

**ಉತ್ತರ:** ಹುಬ್ಬು ಹಾಗೂ ಹಚ್ಚೆ ಹಾಕುವುದನ್ನು ಅನುಮತಿಸಲಾಗುವುದಿಲ್ಲ. ಹದೀಸ್‌ಗಳಲ್ಲಿಯೂ ಇದನ್ನು ನಿಷೇಧಿಸಲಾಗಿದೆ, ಸರ್ವಶಕ್ತನಾದ ಅಲ್ಲಾಹನು ಸೌಂದರ್ಯಕ್ಕಾಗಿ ದೇಹವನ್ನು (tatto) ಚುಚ್ಚುವವರನ್ನು, ಚುಚ್ಚಿಸಿಕೊಳ್ಳುವವರನ್ನು, ಮುಖದ ಮೇಲಿನ ಕೂದಲುಗಳನ್ನು ಪರಚಿಕೊಳ್ಳುವವರನ್ನು, ಮುಂಭಾಗದ ಹಲ್ಲುಗಳಲ್ಲಿ ಅಂತರವನ್ನು ಉಂಟುಮಾಡುವವರನ್ನು ಮತ್ತು ಕೂದಲುಗಳಲ್ಲಿ ತೇಪೆ ಹಾಕಿಸಿಕೊಳ್ಳುವವರು ಹಾಗೂ ತೇಪೆ ಹಾಕುವವರರನ್ನು ಅಲ್ಲಾಹನು ಶಪಿಸಿದ್ದಾನೆ ಅವರು ಅಲ್ಲಾಹನ ಸೃಷ್ಟಿಯಲ್ಲಿ ಬದಲಾವಣೆಯನ್ನು ಸೃಷ್ಟಿಸುತ್ತಾರೆ. (ಸಹೀಹ್ ಬುಖಾರಿ ಕಿತಾಬ್ ಅಲ್-ಲಿಬಾಸ್)

ಇಸ್ಲಾಮಿನ ಪ್ರತಿಯೊಂದು ಆಜ್ಞೆಗಳು ಕೆಲವು ಬುದ್ಧಿವಂತಿಕೆಯನ್ನು ಹೊಂದಿದೆ. ಅಂತೆಯೇ, ಕೆಲವು ಇಸ್ಲಾಮಿಕ್ ಆದೇಶಗಳು ನಿರ್ದಿಷ್ಟ ಹಿನ್ನೆಲೆಯನ್ನು ಹೊಂದಿವೆ, ಈ ಆದೇಶಗಳನ್ನು ಈ ಹಿನ್ನೆಲೆಯ ಹೊರಗೆ ನೋಡಿದರೆ, ಆದೇಶದ ಆಕಾರವು ಬದಲಾಗುತ್ತದೆ. ಪ್ರವಾದಿ(ಸ) ರವರು ಆಗಮಿಸಿದಾಗ, ಜಗತ್ತಿನಲ್ಲಿ ಮತ್ತು ವಿಶೇಷವಾಗಿ ಅರೇಬಿಯನ್ ಪರ್ಯಾಯ ದ್ವೀಪದಲ್ಲಿ, ವಿವಿಧ ರೀತಿಯ ಬಹುದೇವತಾವಾದದ ವಿಷವು ಎಲ್ಲೆಡೆ ಹರಡಿತು, ಮಾನವೀಯತೆಯನ್ನು ಹಿಡಿದಿಟ್ಟುಕೊಳ್ಳುವ ವಿವಿಧ ರೀತಿಯ ತಪ್ಪುಗಳು ಮತ್ತು ಮಹಿಳೆಯರು ಮತ್ತು ಪುರುಷರು ವಿಭಿನ್ನವಾದ ಬಹುದೇವಾರಾಧನೆಯಲ್ಲಿ ತೊಡಗಿದ್ದರು.

ಮೇಲೆ ತಿಳಿಸಿದ ವಿಷಯಗಳ ನಿಷೇಧದ ಆಧಾರದ ಮೇಲೆ ಹದೀಸ್‌ಗಳಲ್ಲಿ ಎರಡು ವಿಷಯಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸಲಾಗಿದೆ. ಒಂದು ಅವುಗಳ ಫಲವಾಗಿ ಅಲ್ಲಾಹನ ಸೃಷ್ಟಿಯಲ್ಲಿ ಬದಲಾವಣೆಯನ್ನು ಉದ್ದೇಶಿಸಲಾಗಿದೆ ಮತ್ತು ಇನ್ನೊಂದು ಸೌಂದರ್ಯವನ್ನು ಸಾಧಿಸುವುದು.

ಈ ಎರಡು ವಿಷಯಗಳನ್ನು ನಾವು ಪರಿಗಣಿಸಿದಾಗ, ಮೊದಲನೆಯದು, ಅಂದರೆ ಅಲ್ಲಾಹನ ಸೃಷ್ಟಿಯಲ್ಲಿನ ಬದಲಾವಣೆ, ಅಲ್ಲಿ ಅದು ಸಾಮಾಜಿಕ ಅನಿಷ್ಟಗಳನ್ನು ಸೂಚಿಸುತ್ತದೆ, ಇದು ಬಹುದೇವತಾ ಕ್ರಿಯೆಗಳನ್ನು ಸಹ ಪ್ರತಿಬಿಂಬಿಸುತ್ತದೆ. ಇದನ್ನು ಹಿರಿತನದ ಸಂಕೇತವಾಗಿ ತೆಗೆದುಕೊಳ್ಳುತ್ತದೆ, ಕೂದಲಲ್ಲಿ ಉದ್ದವಾದ ತೇಪೆಗಳನ್ನು ಹಾಕಿ ತಲೆಯ ಮೇಲೆ ಕೂದಲ ಪಗಡಿಯನ್ನಾಗಿ ಇರಿಸಿ ಅದನ್ನು ಹಿರಿತನದ ಚಿಹ್ನೆಯನ್ನಾಗಿ ಹೇಳುವುದು, ಯಾವುದಾದರು ಪೀರ್ ಅಥವಾ ಗುರುವಿಗಾಗಿ ಕೂದಲನ್ನು ಅರ್ಪಿಸಿ ಅದನ್ನು ಜಡೆ ಮಾಡುವುದು ಅಥವಾ ಬೋದಿಯನ್ನು ಅರ್ಪಣೆಯಾಗಿ ಇಡುವುದು, ಕೂದಲನ್ನು ನಾಲ್ಕು ಭಾಗಗಳಾಗಿ ಕತ್ತರಿಸಿ ಮಧ್ಯದಲ್ಲಿ ರೇಜರ್‌ನಿಂದ ಬೋಳಿಸಿಕೊಂಡು ಅದನ್ನು ಆಶೀರ್ವಾದವೆಂದು ಪರಿಗಣಿಸುತ್ತಾರೆ. ಅದೇ ರೀತಿಯಲ್ಲಿ, ಅನುಗ್ರಹಕ್ಕಾಗಿ ದೇಹ, ಮುಖ ಮತ್ತು ತೋಳು ಇತ್ಯಾದಿಗಳ ಮೇಲೆ ದೇವತೆ, ವಿಗ್ರಹ ಅಥವಾ ಪ್ರಾಣಿಯ ಆಕಾರವನ್ನು ಚುಚ್ಚಿಸಿಕೊಳ್ಳುವುದು. ಇವೆಲ್ಲ ಬಹುದೇವತಾ ವಿಧಾನಗಳಾಗಿದ್ದು ಅವುಗಳ ಹಿಂದೆ ಧಾರ್ಮಿಕ ಮೂಢನಂಬಿಕೆಗಳಿದ್ದವು.

ಎರಡನೆಯದಾಗಿ, ಸೌಂದರ್ಯಕ್ಕಾಗಿ ಇದನ್ನು ಮಾಡುವುದು, ಕೆಲವು ವಿಷಯಗಳಲ್ಲಿ, ಸಾಮಾಜಿಕ ಅನೈತಿಕತೆ ಮತ್ತು ಅಶ್ಲೀಲತೆಯನ್ನು ತೋರಿಸುತ್ತದೆ. ಕಾನೂನುಬದ್ಧ ಮಿತಿಯೊಳಗೆ ವಾಸಿಸುವಾಗ ಒಬ್ಬ ವ್ಯಕ್ತಿಯು ತನ್ನ ಸೌಂದರ್ಯಕ್ಕಾಗಿ ಯಾವುದೇ ಕಾನೂನುಬದ್ಧ ವಿಧಾನವನ್ನು ಅಳವಡಿಸಿಕೊಳ್ಳುವುದನ್ನು ನಿಷೇಧಿಸಲಾಗಿಲ್ಲ. ಆದ್ದರಿಂದ, ಒಂದು ಹದೀಸಿನಲ್ಲಿ ಒಬ್ಬ ವ್ಯಕ್ತಿಯು ಹೇಳಿದನು ನನಗೆ ಚೆನ್ನಾಗಿ ಕಾಣುವುದು ಮತ್ತು ನಾನು ಬಯಸುವುದೇನೆಂದರೆ ನನ್ನ ಬಟ್ಟೆ ಚೆನ್ನಾಗಿರಲಿ, ನನ್ನ ಬೂಟುಗಳು ಚೆನ್ನಾಗಿರಲಿ, ಇದು ಅಹಂಕಾರದಲ್ಲಿ ಸೇರಿದೆಯೇ? ಅದಕ್ಕೆ ಪ್ರವಾದಿ(ಸ) ನುಡಿದರು: "ಇದು ಅಹಂಕಾರವಲ್ಲ." ಸತ್ಯವನ್ನು ನಿರಾಕರಿಸುವ ಮತ್ತು ಇತರರನ್ನು ಧಿಕ್ಕರಿಸುವ ಹೆಸರೇ ಅಹಂಕಾರವಾಗಿದೆ. ಮತ್ತು ಇದರೊಂದಿಗೆ, ಪವಿತ್ರ ಪ್ರವಾದಿ(ಸ) ನುಡಿದರು **ಇನ್ನಲ್ಲಾಹ ಜಮೀಲುನ್ ಯುಹಿಬ್ಬುಲ್ ಜಮಾಲ** ಅಂದರೆ ಅಲ್ಲಾಹನು ಸುಂದರ ಮತ್ತು ಸೌಂದರ್ಯವನ್ನು ಪ್ರೀತಿಸುತ್ತಾನೆ. (ಸಹೀಹ್ ಮುಸ್ಲಿಂ, ಕಿತಾಬುಲ್ ಈಮಾನ್, ಅಧ್ಯಾಯ ತಹ್ರೀಮ್ ಅಲ್-ಕಿಬ್ರ್ ವ ಬಯಾನಿಹಿ) ಹಾಗೆಯೇ, ಹದೀಸ್‌ಗಳಲ್ಲಿ ಹುಡುಗಿಯರನ್ನು ಮದುವೆಯಾಗುವಾಗ, ಆ ಕಾಲದ ವಿಧಾನಗಳ ಪ್ರಕಾರ ಅವರನ್ನೂ ಅಲಂಕರಿಸಿ ಸುಂದರಗೊಳಿಸಲಾಯಿತು ಎಂದು ಉಲ್ಲೇಖಿಸಲಾಗಿದೆ. (ಸಹೀಹ್ ಅಲ್-ಬುಖಾರಿಮ, ಕಿತಾಬ್ ಅಲ್-ಹಿಬ್ಬಾ ವಾ ಫದ್ಲಾಹಾ ವಾ ಅಲ್-ತಹ್ರಿದ್ ಅಲ್-ಅಲಿಹಾ ಅಧ್ಯಾಯ ಅಲ್ಇಸ್ತಿಯಾರ ಲಿಲ್ಉರೂಸ್ ಇಂದಲ್ ಬಿನಾ) (ಫತ್‌ಹಲ್ ಬಾರಿ ಶರಹ್ ಸಹೀಹ್ ಬುಖಾರಿ, ಇತಾಬುನ್ನಿಕಾಹ್)

ಆದ್ದರಿಂದ, ಯಾವ ಸೌಂದರ್ಯವನ್ನು ಸಾಧಿಸುವುದಕ್ಕೆ ಪವಿತ್ರ ಪ್ರವಾದಿ(ಸ) ರವರು ಶಾಪದ ರೀತಿಯಲ್ಲಿ ಎಚ್ಚರಿಸಿದಾಗ, ಅದರ ಬಗ್ಗೆ ಖಂಡಿತವಾಗಿಯೂ ಇನ್ನೊಂದು ಅರ್ಥವನ್ನು ಹೊಂದಿರುತ್ತದೆ. ಆದ್ದರಿಂದ, ಈ ವಿಷಯದಲ್ಲಿ ನಾವು ಈ ಹದೀಸ್‌ಗಳನ್ನು ಪರಿಗಣಿಸಿದಾಗ, ಈ ವಸ್ತುಗಳ

ನಿಷೇಧದ ಜೊತೆಗೆ, ಬನೀ ಇಸ್ರಾಈಲ್ ರವರು ಯಾವಾಗ ನಾಶವಾದರು ಎಂದರೆ ಅವರ ಮಹಿಳೆಯರು ಅಂತಹ ಕೆಲಸಗಳನ್ನು ಮಾಡಲು ಪ್ರಾರಂಭಿಸಿದಾಗ ಎಂದು ಪವಿತ್ರ ಪ್ರವಾದಿ(ಸ) ರವರು ಹೇಳಿದ್ದಾರೆ. ಪ್ರವಾದಿ ಮುಹಮ್ಮದ್(ಸ) ಅವರ ಆಗಮನದ ಸಮಯದಲ್ಲಿ, ಯಹೂದಿಗಳಲ್ಲಿ ಅಶ್ಲೀಲತೆಯು ಸಾಮಾನ್ಯವಾಗಿತ್ತು ಮತ್ತು ಮದೀನಾದಲ್ಲಿ ಅನೇಕ ವೇಶ್ಯಾಗೃಹಗಳು ಇದ್ದವು, ಅದರಲ್ಲಿ ತೊಡಗಿರುವ ಮಹಿಳೆಯರು ಪುರುಷರನ್ನು ಆಕರ್ಷಿಸಲು ಇಂತಹ ತಂತ್ರಗಳನ್ನು ಬಳಸಿದರು, ಆದ್ದರಿಂದ ಪ್ರವಾದಿ(ಸ) ರವರು ಈ ಕೃತ್ಯಗಳನ್ನು ಖಂಡಿಸಿ ಆ ಸಮಯದಲ್ಲಿ ಮುಮಿನರಿಗೆ ಹಾಗೆ ಮಾಡುವುದರಿಂದ ನಿಷೇಧಿಸಿದರು.

ಆದ್ದರಿಂದ, ಈ ವಸ್ತುಗಳ ನಿಷೇಧದಲ್ಲಿ, ಅವುಗಳ ಪರಿಣಾಮವಾಗಿ, ಮನುಷ್ಯನ ದೈಹಿಕ ಸ್ಥಿತಿಯಲ್ಲಿ ಅಂತಹ ಕೃತಕ ಬದಲಾವಣೆಯು ಸಂಭವಿಸಿದರೆ, ಪುರುಷ ಮತ್ತು ಮಹಿಳೆಯ ನಡುವಿನ ವ್ಯತ್ಯಾಸವನ್ನು ಸರ್ವಶಕ್ತನಾದ ಅಲ್ಲಾಹನು ಮಾನವರಲ್ಲಿ ಸೃಷ್ಟಿಸಿದ ವ್ಯತ್ಯಾಸವು ಕೊನಡಗೊಳ್ಳುತ್ತದೆ ಅಥವಾ ಈ ರೀತಿಯ ಕೃತ್ಯದಿಂದ ಅತೀ ದೊಡ್ಡ ಪಾಪವಾದ ಶಿರ್ಕ್‌ನ ಕಡೆಗೆ ಪ್ರಚೋದನೆಯ ಭಯವಿದ್ದರೆ ಅಥವಾ ಈ ರೀತಿಯ ಕೃತ್ಯದಿಂದ ತನ್ನ ಕಡೆಗೆ ವಿರುದ್ಧ ಲಿಂಗವನ್ನು ಪ್ರಚೋದಿಸುವ ಸಲುವಾಗಿ ನಡೆಸಿದರೆ, ಆಗ ಈ ಎಲ್ಲಾ ಕ್ರಿಯೆಗಳು ಕಾನೂನುಬಾಹಿರ ಮತ್ತು ದೋಷಾರೋಪಣೆಗೆ ಅರ್ಹವೆಂದು ಘೋಷಿಸಲಾಗುವುದು.

ಹಾಗಾಗಿ, ಹಚ್ಚೆ (Tatto) ಹಾಕಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಅದು ಪುರುಷನಾಗಿರಲಿ ಅಥವಾ ಮಹಿಳೆಯಾಗಿರಲಿ, ಅದರ ಹಿಂದಿರುವ ಏಕೈಕ ಉದ್ದೇಶವೆಂದರೆ ಅದನ್ನು ಪ್ರದರ್ಶಿಸುವುದು ಮತ್ತು ವಿರುದ್ಧ ಲಿಂಗವನ್ನು ನಿಮ್ಮ ಕಡೆಗೆ ಅನ್ಯಾಯವಾಗಿ ಆಕರ್ಷಿಸುವುದಾಗಿತ್ತದೆ. ಅದಕ್ಕಾಗಿಯೇ ಜನರು ಸಾಮಾನ್ಯವಾಗಿ ದೇಹದ ಭಾಗಗಳಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ, ಅದನ್ನು ಅವರು ಸಾರ್ವಜನಿಕವಾಗಿ ಬಹಿರಂಗಪಡಿಸಬಹುದು. ಆದರೆ ಯಾರಾದರು ದೇಹದ ಗುಪ್ತ ಭಾಗದ ಮೇಲೆ ಯಾರಾದರೂ ಹಚ್ಚೆ ಹಾಕಿಸಿಕೊಂಡರೆ ಅದರ ಹಿಂದೆಯೂ ಅದೇ ಆಲೋಚನೆ ಇರುತ್ತದೆ ಅಂದರೆ ಇದರಿಂದ ಕೆಟ್ಟ ಕಾರ್ಯಗಳು ಮಾಡಿದರೆ, ಈ ಗುಪ್ತ ಭಾಗಗಳಲ್ಲಿ ಮಾಡಿದ ಹಚ್ಚೆಯನ್ನು ವಿರುದ್ಧ ಲಿಂಗದ ಮುಂದೆ ಪ್ರದರ್ಶಿಸಬಹುದು ಎಂದಾಗಿರುತ್ತದೆ. ಈ ಎರಡೂ ವಿಧಾನಗಳು ಕಾನೂನುಬಾಹಿರವಾಗಿವೆ ಏಕೆಂದರೆ ಅವು ಇಸ್ಲಾಮಿಕ್ ಬೋಧನೆಗಳಿಗೆ ವಿರುದ್ಧವಾಗಿವೆ.

ಇದಲ್ಲದೆ, ಹಚ್ಚೆಗಳು ಅನೇಕ ದೈಹಿಕ ಮತ್ತು ವೈದ್ಯಕೀಯ ಅನಾನುಕೂಲಗಳನ್ನು ಹೊಂದಿವೆ. ಆದ್ದರಿಂದ, ಹಚ್ಚೆ ಹಾಕಿದ ದೇಹದ ಭಾಗಗಳಲ್ಲಿ ಚರ್ಮದ ಅಡಿಯಲ್ಲಿ ಬೆವರು ಗ್ರಂಥಿಗಳು ಕೆಟ್ಟದಾಗಿ ಪರಿಣಾಮ ಬೀರುತ್ತವೆ ಮತ್ತು ಹಚ್ಚೆ ಹಾಕಿದ ನಂತರ, ದೇಹದ ಆ ಭಾಗಗಳಲ್ಲಿ ಬೆವರು ಕಡಿಮೆಯಾಗುತ್ತದೆ, ಇದು ವೈದ್ಯಕೀಯವಾಗಿ ಹಾನಿಕಾರಕವಾಗಿದೆ. ಅಂತೆಯೇ, ಕೆಲವು ರೀತಿಯ ಟ್ಯಾಟೂಗಳು ದೇಹದ ಶಾಶ್ವತ ಅಂಗವಾಗುವುದರಿಂದ, ದೇಹವು ಬೆಳೆದಂತೆ ಅಥವಾ ಕುಗ್ಗಿದಾಗ ಟ್ಯಾಟೂವಿನ ಆಕಾರವು ಸಹ ಬದಲಾಗುತ್ತದೆ, ಟ್ಯಾಟೂವು ಒಳ್ಳೆಯದಕ್ಕಿಂತ ಕೊಳಕು ಎಂದು ತೋರುತ್ತದೆ, ಕೆಲವು ವ್ಯಕ್ತಿಗ:ಳು ಅದನ್ನು ಬಹಳ ಕೆಟ್ಟದ್ದು ಎಂದು ಭಾವಿಸುತ್ತಾರೆ ಆದರೆ ಅದನ್ನು ತೊಡೆದುಹಾಕುವುದು ಸಾಧ್ಯವಿಲ್ಲ. ಆದ್ದರಿಂದ, ಈ ಕಾರಣಗಳಿಂದಾಗಿ ಹಚ್ಚೆ ಹಾಕಿಸಿಕೊಳ್ಳುವುದು ಒಂದು ವ್ಯರ್ಥ ಕೆಲಸವಾಗಿದೆ.

ಉಳಿದಂತೆ, ತಮ್ಮ ಕಾನೂನುಬದ್ಧ ಮತ್ತು ಇಸ್ಲಾಮಿಕ್ ಮಿತಿಗಳಲ್ಲಿ ವಾಸಿಸುವ ಮಹಿಳೆಯರ ಹುಬ್ಬುಗಳಿಗೆ ಸಂಬಂಧಿಸಿದಂತೆ, ಈ ದುಷ್ಕೃತ್ಯಗಳ ಹಿನ್ನೆಲೆಯಲ್ಲಿ ಮುಮಿನ್ ಮಹಿಳೆಯರು ಈ ಕೆಲಸಗಳನ್ನು ಮಾಡುವುದನ್ನು ಪ್ರವಾದಿ(ಸ) ನಿಷೇಧಿಸಿದರು. ಆದರೆ ನೋವು ಅಥವಾ ಅನಾರೋಗ್ಯದ ಕಾರಣದಿಂದ ವಿನಾಯಿತಿಯನ್ನು ನೀಡಿದ್ದಾರೆ. ಆದ್ದರಿಂದ, ಹಝ್ರತ್ ಅಬ್ದುಲ್ಲಾ ಬಿನ್ ಮಸೂದ್(ರ) ಅವರಿಂದ ವರದಿಯಾಗಿದೆ **ಸಮಿಅ್ತು ರಸೂಲಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ ನಹಾ ಅನ್ನಾಮಿಸತಿ ವಲ್‌ವಾಶಿರತಿ ವಲ್‌ವಾಸಿಲತಿ ವಲ್‌ವಾಶಿಮತಿ ಇಲ್ಲಾ ಮಿನ್ ದಾಇನ್** (ಮಸ್ನದ್ ಅಹ್ಮದ್ ಬಿನ್ ಹಂಬಲ್) ಅಂದರೆ ನಾನು ಪ್ರವಾದಿ(ಸ) ಅವರು ಕೂದಲು ಕೀಳುವ ಸಾಧನೆಯಿಂದ ಕೂದಲುಗಳನ್ನು ಕೀಳುವವರು, ಹಲ್ಲುಗಳನ್ನು ಹಿರಿತಗೊಳಿಸುವವರು, ಕೃತಕ ಕೂದಲುಗಳನ್ನು ಹಾಕಿಕೊಳ್ಳುವುದು ಮತ್ತು ದೇಹದ ಮೇಲೆ ಹಚ್ಚೆ ಹಾಕಿಸಿಕೊಳ್ಳಲು ನಿಷೇಧಗೊಳಿಸುವುದನ್ನು ನಾನು ಕೇಳಿದೆ. ಆದರೆ ಯಾವುದಾದರು ಕಾಯಿಲೆ ಇದ್ದಲ್ಲಿ ಅದನ್ನು ಅನುಮತಿಸಲಾಗಿದೆ.

ಇಸ್ಲಾಂ ನಿಯ್ಯತ್ತುಗಳ ಮೇಲೆ ಕ್ರಿಯೆಗಳ ಔಷಧವನ್ನು ಇರಿಸಿದೆ. ಆದ್ದರಿಂದ, ಈ ಯುಗದಲ್ಲಿ, ಮಹಿಳೆಯರು ಕಾನೂನುಬದ್ಧ ರೀತಿಯಲ್ಲಿ ಮತ್ತು ನ್ಯಾಯಸಮ್ಮತ ಉದ್ದೇಶಕ್ಕಾಗಿ ಈ ವಸ್ತುಗಳ ಲಾಭವನ್ನು ಪಡೆದರೆ, ಇದರಲ್ಲಿ ಯಾವುದೇ ತೊಂದರೆ ಇಲ್ಲ. ಆದರೆ ಈ ಕ್ರಿಯೆಗಳ ಪರಿಣಾಮವಾಗಿ ದುಷ್ಟತನದ ಕಡೆಗೆ ಒಲವು ಕಂಡುಬಂದರೆ, ಬಹುದೇವತಾ ಆಚರಣೆಯ ಅಭಿವ್ಯಕ್ತಿಯಾದರೆ ಅಥವಾ ಇಸ್ಲಾಂನ ಸ್ಪಷ್ಟ ಆದೇಶಕ್ಕೆ ಅವಿಧೇಯತೆಯನ್ನು ಕಂಡರೆ, ಉದಾಹರಣೆಗೆ, ಈ ಯುಗದಲ್ಲಿಯೂ ಸಹ, ಮಹಿಳೆಯರು ತಮ್ಮನ್ನು ಸ್ವಚ್ಛಗೊಳಿಸುವಾಗ ಅಥವಾ ವ್ಯಾಕ್ಸಿಂಗ್ ಮಾಡುವಾಗ ಮುಸುಕು ಧರಿಸದಿದ್ದರೆ ಮತ್ತು ಅನ್ಯ ಮಹಿಳೆಯರ ಮುಂದೆ ಅವರ ಅಶ್ಲೀಲತೆ ಬಹಿರಂಗಪಡಿಸಿದರೆ, ಈ ಕೆಲಸವನ್ನು ಪವಿತ್ರ ಪ್ರವಾದಿ(ರ)ರವರ ಅದೇ ಎಚ್ಚರಿಕೆಯ ಅಡಿಯಲ್ಲಿ ಪರಿಗಣಿಸಲಾಗುತ್ತದೆ. ಮತ್ತು ಇದನ್ನು ಅನುಮತಿಸಲಾಗುವುದಿಲ್ಲ.

ಅದೇ ರೀತಿ, ಈ ಸಂದರ್ಭದಲ್ಲಿ, ಕಿಡಿಗೇಡಿತನವನ್ನು ಕೊಲೆಗಿಂತ ದೊಡ್ಡ ಪಾಪವೆಂದು ಘೋಷಿಸುವ ಮೂಲಕ ಕಿಡಿಗೇಡಿತನವನ್ನು ನಿಲ್ಲಿಸಲು ಸರ್ವಶಕ್ತನಾದ ಅಲ್ಲಾಹನು ಆದೇಶಿಸಿದ್ದಾನೆ ಎಂಬುದನ್ನು ಸಹ ನೆನಪಿನಲ್ಲಿಡಬೇಕು. ಮತ್ತು ಕೆಲವು ಉದಾಹಣೆಗಳು ಕಂಡುಬರುವುದೇನೆಂದರೆ ಮದುವೆಯ ನಂತರ ಸಂಬಂಧಗಳು ಕೊನೆಗೊಂಡ ಅಥವಾ ವಿಚ್ಛೇದನಗಳು ನಡೆದಿವೆ ಅದಕ್ಕೆ ಕಾರಣ ಗಂಡನಿಗೆ ಹೆಂಡತಿಯ ಮುಖದ ಮೇಲೆ ಕೂದಲು ಇವೆ ಎಂದು ನಂತರ ತಿಳಿದುಬಂತು. ಕೆಲವು ಕೂದಲನ್ನು ಸ್ವಚ್ಛಗೊಳಿಸದಿದ್ದರೆ ಅಥವಾ ಎಳೆಯದಿದ್ದರೆ, ಅದು ಹೆಚ್ಚು ಮನೆಗಳನ್ನು ಹಾಳುಮಾಡುತ್ತದೆ. ಇಷ್ಟವಿಲ್ಲದಿರುವಿಕೆಗಳ ದೀರ್ಘ ಸರಣಿ ಪ್ರಾರಂಭವಾಗುತ್ತದೆ. ಮತ್ತು ಈ ಆಜ್ಞೆಯೊಂದಿಗೆ ಪವಿತ್ರ ಪ್ರವಾದಿ(ಸ) ಅವರ ಉದ್ದೇಶವು ಸಮಾಜದಲ್ಲಿ ಅಂತಹ ಪರಿಸ್ಥಿತಿ ಉಂಟಾಗುತ್ತದೆ, ಇದರ ಪರಿಣಾಮವಾಗಿ ಮನೆಗಳಲ್ಲಿ ಗಲಭೆಗಳು ಹರಡುತ್ತವೆ ಎಂದು ಹೇಳಲಾಗುವುದಿಲ್ಲ. ಇಂತಹ ಕಟುವಾದ ಮಾತುಗಳನ್ನು ಹೇಳುವುದರಲ್ಲಿ ಕಾಣುವ ಜಾಣತನವೇನೆಂದರೆ ಬಹುದೇವಾರಾಧನೆಯು ಮಹಾಪಾಪವಾಗಿದೆ ಮತ್ತು ಈ ಮಾತುಗಳನ್ನು ದೇವಾನುದೇವತೆಗಳು ಇತ್ಯಾದಿಗಳ ಸಲುವಾಗಿ ತೆಗೆದುಕೊಂಡಿರುವದರಿಂದ ಅಥವಾ ಅಶ್ಲೀಲತೆಯು ಪ್ರಚುರಪಡಿಸಲ್ಪಟ್ಟುದರಿಂದ ನೀವು(ಸ)ರವರು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದರು. ಅದರೊಂದಿಗೆ ಬಲವಾದ ಪದಗಳಲ್ಲಿ ಖಂಡಿಸಿದ್ದಾರೆ ಹೀಗೆ ಬಹುದೇವತಾ ಪದ್ಧತಿಗಳು ಮತ್ತು ಅಶ್ಲೀಲತೆಯನ್ನು ಖಂಡಿಸಿದ್ದಾರೆ.

(ಸಂಕಲನಕಾರರಿಂದ ಗಮನಿಸಿ: ಮೇಲಿನ ಉತ್ತರದ ಕೆಲವು ಭಾಗಗಳನ್ನು ಕೆಲವು ಪ್ರಶ್ನೆಗಳಿಗೆ ಪ್ರತಿಕ್ರಿಯೆಯಾಗಿ ಈಗಾಗಲೇ ವಿವಿಧ ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಆದರೆ ಇಲ್ಲಿ, ಸಂಪೂರ್ಣ ಮತ್ತು ಏಕೀಕೃತ ರೂಪದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಮೇಲಿನ ಪ್ರಶ್ನೆಗೆ ನೀಡಿದ ಉತ್ತರವಾಗಿದೆ ಇದು ಓದುಗರ ಹಿತಾದೃಷ್ಟಿಯಿಂದ ಪ್ರಕಟಿಸಲಾಗಿದೆ)

**ಪ್ರಶ್ನೆ:** ಗೌರವಾನ್ವಿತ ನಾಝಿಮ್ ಸಾಹಿಬ್ ದಾರುಲ್–ಇಫ್ತಾ ಅವರು ಜುಮುಅ ನಮಾಝ್ ಅಥವಾ ಝುಹರ್ ನಮಾಝ್ ಅನ್ನು ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದಾಗ ಈದ್ ಪ್ರಾರ್ಥನೆಯನ್ನು ನಿರ್ವಹಿಸುವ ಬಗ್ಗೆ ವರದಿಗೆ ಪ್ರತಿಕ್ರಿಯೆಯಾಗಿ, ಹುಝೂರ್ ಅನ್ವರ್(ಅತಬಿಅ) ಅವರ 16 ಮೇ 2021 ದಿನಾಂಕದ ಪತ್ರದಲ್ಲಿ ಈ ವಿಷಯದ ಕುರಿತು ಕೆಳಗಿನ ತತ್ವ ಸೂಚನೆಗಳನ್ನು ನೀಡಿದರು. ಹುಝೂರ್ ಅನ್ವರ್(ಅತಬಿಅ) ಹೇಳಿದರು:

**ಉತ್ತರ:** ಈದ್ ಮತ್ತು ಜುಮುಅವನ್ನು ಒಂದೇ ದಿನದಲ್ಲಿ ಒಟ್ಟುಗೂಡಿಸಿದಾಗ, ಈದ್ ನಮಾಝ್ ನಿರ್ವಹಿಸಿದ ನಂತರ, ಆ ದಿನದಂದು ಜುಮುಆ ನಮಾಝ್ ಮತ್ತು ಝುಹರ್ ನಮಾಝ್ ಎರಡನ್ನೂ ನಿರ್ವಹಿಸದಿರುವ ಬಗ್ಗೆ ಕೇವಲ ಹಝ್ರತ್ ಅಬ್ದುಲ್ಲಾ ಬಿನ್ ಝುಬೈರ್(ರ) ಅವರ ನಿಲುವು ಮತ್ತು ಅಭ್ಯಾಸ ಇರುತ್ತದೆ. ಮತ್ತು ಅದು ಕೂಡ ಒಂದು ಮಖ್ತೂ ವರದಿಯ ಮೇಲೆ ಆಧಾರಿತವಾಗಿದೆ ಮತ್ತು ಈ ವರದಿಯ ಇಬ್ಬರು ವರದಿಗಾರರ ಹೇಳಿಕೆಯಲ್ಲಿ ವಿರೋಧಾಭಾಸವೂ ಇದೆ. ಅಧಿಕೃತ ಮತ್ತು ವಿಶ್ವಾಸಾರ್ಹ ಸಂಪ್ರದಾಯಗಳಲ್ಲಿ, ಪ್ರವಾದಿ(ಸ) ಅವರ ಸುನ್ನತ್ ಮತ್ತು ಅವರ ಖಲೀಫರು ಮತ್ತು ಪ್ರವಾದಿ(ಸ) ಅವರ ಸಹಾಬರವರು ಅದೇ ನಿಲುವನ್ನು ಕಂಡುಕೊಳ್ಳುತ್ತಾರೆ, ಅವರೆಲ್ಲರೂ ಈದ್ ಪ್ರಾರ್ಥನೆಯನ್ನು ಮಾಡಿದ ನಂತರ ಆ ದಿನದಂದು ಜುಮುಅದ ನಮಾಝನ್ನು ನಿರ್ವಹಿಸಿದರು. ಮತ್ತು ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಆದಿಂದ ಬಿಡುವು ನೀಡಿ, ಅವರು ತಮ್ಮ ಪ್ರದೇಶಗಳಲ್ಲಿ ಝುಹರ್ ನಮಾಝ್ ನಿರ್ವಹಿಸಲು ಸೂಚಿಸಿದರು. ಮತ್ತು ಕೆಲವು ಸಂದರ್ಭಗಳಲ್ಲಿ, ಈದ್ ಪ್ರಾರ್ಥನೆಯ ನಂತರ ಜುಮುಅವನ್ನು ನಿರ್ವಹಿಸಲಿಲ್ಲ, ಆದರೆ ಝುಹರ್ ನಮಾಝನ್ನು ಖಂಡಿತವಾಗಿಯೂ ಅದರ ಸಮಯಕ್ಕೆ ನಿರ್ವಹಿಸಲಾಯಿತು.

ಈ ನಿಲುವನ್ನು ನಾವು ಹಝ್ರತ್ ಮಸೀಹ್ ಮೌಊದ್

*(ಪುಟ ಸಂಖೆ 09ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 18 August 2022, Issue No. 33

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 32ರ ಉಳಿದ ಭಾಗ)**

2010 ರಲ್ಲಿ ಅಹ್ಮದಿಯಾ ಜಮಾಅತ್ ಜರ್ಮನಿ ಮಸೀದಿ ನಿರ್ಮಾಣಕ್ಕಾಗಿ ಅರ್ಜಿ ಕೊಟ್ಟಿದ್ದರು. ಆಗ ವಿರೋಧ ವ್ಯಕ್ತವಾಯಿತು. ಆದರೆ ವಿರೋಧಿಸುವವರ ಸಂಖ್ಯೆ ಕಡಿಮೆ ಇತ್ತು. ನ್ಯಾಯಾಲಯ ಹತ್ತಲು ಸಹ ಪ್ರಯತ್ನ ಮಾಡಿದರು. ಆದರೆ ಅದನ್ನು ರದ್ದು ಮಾಡಲಾಯಿತು.

ಅಹ್ಮದಿಯಾ ಮುಸ್ಲಿಂ ಜಮಾಅತ್ ಬಾಂಧವರು Isemlohn ಅನ್ನು ತಮ್ಮ ಮಾತೃಭೂಮಿ ಎಂದು ಭಾವಿಸುತ್ತಾರೆ. ಅವರು ಇತರ ಧರ್ಮಿಯರನ್ನು ಸಹ ಆಹ್ವಾನಿಸುತ್ತಾರೆ ಮತ್ತು ಶಾಂತಿಯ ಶಿಕ್ಷಣ ಪ್ರಸ್ತುತಪಡಿಸುತ್ತಾರೆ. ಮಸೀದಿಯ ಎಲ್ಲ ಖರ್ಚು ವೆಚ್ಚ ಚಂದಾಗಳ ಮೂಲಕ ಸಂಗ್ರಹಿಸುತ್ತಾರೆ.

### 10 ಜೂನ್ 2015, ಬುಧವಾರ

### ಜರ್ಮನಿಯಿಂದ ಹೊರಡುವಿಕೆ ಹಾಗೂ ಲಂಡನ್‌ನಲ್ಲಿ ಆಗಮನ

* ಮುಂಜಾನೆ 4 ಗಂಟೆಗೆ ಹುಝೂರೆ ಅನ್ವರ್ (ಅಬಿಅ) ಮಸ್ಜಿದ್ ಬಶಾರತ್ ಓಸ್ನಬುರುಕನಲ್ಲಿ ಫಜರ್ ನಮಾಝ್ ನಿರ್ವಹಿಸಿಕೊಟ್ಟು ತಮ್ಮ ವಸತಿ ನಿಲಯಕ್ಕೆ ತೆರಳಿದರು.

* ಇಂದು ಕಾರ್ಯಕ್ರಮದನ್ವಯ ಜರ್ಮನಿ ಓಸ್ನಬುರುಕ್‌ನಿಂದ ಲಂಡನ್ (ಯು.ಕೆ) ಪ್ರಯಾಣಿಸಬೇಕಾಗಿತ್ತು. ಸ್ಥಳೀಯ ಜಮಾಅತ್ ಬಾಂಧವರು, ಪುರುಷರು, ಮಹಿಳೆಯರು, ಮಕ್ಕಳು ವೃದ್ಧರು ತನ್ನ ಪ್ರೀತಿಯ ನೇತಾರರನ್ನು ಬೀಳ್ಕೊಡಲು ಮುಂಜಾನೆಯಿಂದಲೇ ಮಸೀದಿಯ ಹೊರಗಿನ ಆವರಣದಲ್ಲಿ ಸೇರಲು ಪ್ರಾರಂಭಿಸಿದರು. ಮುಂಜಾನೆ 10 ಗಂಟೆ 45 ನಿಮಿಷಕ್ಕೆ ಹುಝೂರೆ ಅನ್ವರ್ (ಅಬಿಅ) ತಮ್ಮ ವಸತಿ ನಿಲಯದಿಂದ ಹೊರಗೆ ಬಂದರು. ಸಣ್ಣ ಬಾಲಕ ಬಾಲಕಿಯರು ಗುಂಪಾಗಿ ಬೀಳ್ಕೊಡುವ ಗೀತೆಗಳನ್ನು ಪಠಿಸುತ್ತಿದ್ದರು.

ಹುಝೂರೆ ಅನ್ವರ್ (ಅಬಿಅ) ಬಾಲಕ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ಹಂಚಿದರು. ಅನಂತರ ಪ್ರಯಾಣ ಬೆಳೆಸುವ ಮುನ್ನ ಪ್ರಾರ್ಥನೆ ಮಾಡಿಸಿದರು.

* ಪ್ರಾರ್ಥನೆ ನಂತರ ಹುಝೂರೆ ಅನ್ವರ್ ತನ್ನ ಕೈಯನ್ನು ಬೀಸುತ್ತ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿ ತನ್ನ ಪ್ರಯಾಣ ಬೆಳೆಸಿದರು. ಮಹಿಳೆಯರು, ಪುರುಷ ಬಾಂಧವರು ಸತತವಾಗಿ ಕೈ ಬೀಸುತ್ತ ತಮ್ಮ ಪ್ರಿಯ ಇಮಾಮರಿಗೆ ವಿದಾಯ ಕೋರುತ್ತಿದ್ದರು. ಹಲವರ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ವಿದಾಯದ ಈ ಸಮಯ ಅವರ ಮೇಲೆ ಬಹಳವಾಗಿ ಕಠಿಣ ಎನಿಸುತ್ತಿತ್ತು.

* ಓಸ್ನಬುರುಕ್‌ನಿಂದ ಫ್ರಾನ್ಸ್‌ನ ಹಡಗು ತಂಗುದಾಣದವರೆಗಿನ ದೂರವು 580ಕಿ.ಮೀ ಆಗಿತ್ತು. ಹಾಲೆಂಡ್ ಮತ್ತು ಬೆಲ್ಜಿಯಂ ರಸ್ತೆಯಿಂದ ಹಾದು ಹೊಗಬೇಕಾಗುತ್ತದೆ. ಸುಮಾರು 360 ಕಿ.ಮೀ ದೂರ ಪ್ರಯಾಣ ಆದ ನಂತರ ಸುಮಾರು ಮಧ್ಯಾಹ್ನದ 2 ಗಂಟೆಗಿಂತ ಮೊದಲು ಆಯೋಜಿತ ಕಾರ್ಯಕ್ರಮದನ್ವಯ ಬೆಲ್ಜಿಯಂನಲ್ಲಿ motarwayನಲ್ಲಿ ಸಲ್ಲಿಸುವ Arnst ದ ಒಂದು ರೆಸ್ಟೋರೆಂಟ್‌ನಲ್ಲಿ ಮಧ್ಯಾಹ್ನದ ಊಟಕ್ಕಾಗಿ ಪ್ರವಾಸ ತಂಡವು ನಿಂತಿತು. ಅಲ್ಲಿ ಜರ್ಮನಿ ಜಮಾಅತಿನ ಖುದ್ದಾಮರ ಒಂದು ತಂಡ, ಅವರು ಇಲ್ಲಿ ಬರುವ ಮುಂಚೆಯೇ ಊಟ ಮತ್ತು ನಮಾಝ್ ನಿರ್ವಹಣೆಗೋಸ್ಕರ ವ್ಯವಸ್ಥೆ ಮಾಡಿದ್ದರು. ಪ್ರವಾಸ ತಂಡವು ಬರುವ ಮುಂಚೆಯೇ ಎಲ್ಲ ವ್ಯವಸ್ಥೆಗಳು ಪೂರ್ಣಗೊಂಡಿದ್ದವು.

* ಅದೇ ರೆಸ್ಟೋರೆಂಟಿನ ಒಂದು ಭಾಗದಲ್ಲಿ ನಮಾಝ್ ನಿರ್ವಹಣೆಗೋಸ್ಕರ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್ (ಅಬಿಅ) ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅನಂತರ ಊಟವಾದ ನಂತರ 3.00 ಗಂಟೆಗೆ ಪ್ರಯಾಣ ಬೆಳೆಸುವ ಮೊದಲು ಹುಝೂರ್ ಪ್ರೀತಿಪೂರ್ವಕವಾಗಿ ಜರ್ಮನಿಯಿಂದ ಬಂದ ಬಾಂಧವರಿಗೆ ಹಸ್ತಲಾಘವ ಭಾಗ್ಯ ನೀಡಿದರು.

* ಜರ್ಮನಿ ಜಮಾಅತಿನ ಅಮೀರರಾದ ಅಬ್ದುಲ್ಲ ವಾಗಸ್ ಹೌಝುರ್ ಸಾಹಿಬ್, ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ, ಮು. ಹೈದರ್ ಅಲಿ ಝುಫರ್ ಸಾಹಿಬ್, ಜನರಲ್ ಸೆಕ್ರಟರಿ ಮು. ಇಲ್ಯಾಸ್ ಅಹ್ಮದ್ ಕೋಕ ಸಾಹಿಬ್, ಅಸಿಸ್ಟೆಂಟ್ ಜನರಲ್ ಸೆಕ್ರೆಟರಿ ಮು. ಯಾಹ್ಯಾ ಸಾಹಿಬ್, ಮು. ಅಬ್ದುಲ್ಲ ಸಉಪ್ರಾ ಸಾಹಿಬ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಅಧ್ಯಕ್ಷರು ಜರ್ಮನಿ ಮತ್ತು ಅವರ ಜೊತೆಗೆ ಬಂದ ಖುದ್ದಾಮನ ರಕ್ಷಣಾ ತಂಡ ಹುಝೂರೆ ಅನ್ವರ್ ಅವರೊಂದಿಗೆ ಹಸ್ತಲಾಘವ ಪಡೆಯುವ ಭಾಗ್ಯ ಪಡೆದರು. ಆ ಸಂದರ್ಭದಲ್ಲಿ ಅವರೆಲ್ಲರು ಹುಝೂರರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

* ಮೂರು ಗಂಟೆಗೆ ಇಲ್ಲಿಂದ ಫ್ರಾನ್ಸ್‌ನ ಹಡಗು ತಂಗುದಾಣ calais ದತ್ತ ಪ್ರಯಾಣ ಬೆಳೆಸಿದರು. ಇನ್ನೂ 125 ಕಿ.ಮೀ ದೂರ ದಾಟಿದ ನಂತರ ಬೆಲ್ಜಿಯಂನ ಸರಹದ್ದು ಪಾರು ಮಾಡಿ ಫ್ರಾನ್ಸ್ ಪ್ರವೇಶ ಮಾಡಿದರು. ಇಲ್ಲಿಂದ Calais ನಡುವಿನ ದೂರ 95 ಕಿ.ಮೀ ಆಗಿದೆ.

* ಆರು ಗಂಟೆಗೆ ಚಾನಲ್ ಟನಲ್ ಆಗಮಿಸಿದರು. ಜರ್ಮನಿಯಿಂದ ಜೊತೆಯಲ್ಲಿ ಬಂದ ಮಿತ್ರರು ಮತ್ತು ಖುದ್ದಾಮ್‌ನ ರಕ್ಷಣಾ ತಂಡ ಹುಝೂರರಿಗೆ ಚಾನಲ್ ಟನಲ್ ಬೀಳ್ಕೊಡಲು ಮತ್ತು ವಿದಾಯ ಕೋರಲು ಪ್ರವಾಸ ತಂಡ ಜೊತೆಗಿದ್ದರು. ಹುಝೂರೆ ಅನ್ವರ್ ಅವರನ್ನು ಇಲ್ಲಿಂದ ಲಂಡನ್‌ಗೆ ಬೀಳ್ಕೊಟ್ಟು ವಾಪಾಸ್ಸು ಫ್ರಾಂಕ್ ಫರ್ಟ್‌ಗೆ (ಜರ್ಮನಿ) ನಿರ್ಗಮಿಸಿದರು.

* ಪಾಸ್ಪೋರ್ಟ್, ಇಮಿಗ್ರಿಶನ್ ಮತ್ತು ಇತರ ದಸ್ತಾವೇಜುಗಳು ಪರಿಶೀಲನೆಯ ನಂತರ ಪ್ರವಾಸಿಗರ ವಾಹನಗಳು ವಿಶೇಷ ರೀತಿಯ Parking area ಕ್ಕೆ ಬಂದು ನಿಂತವು. ರೈಲು ಹೊರಡಲು ಒಂದಿಷ್ಟು ಸಮಯ ಬಾಕಿ ಇತ್ತು. ಹುಝೂರೆ ಅನ್ವರ್ ಕೆಲ ಸಮಯಕ್ಕಾಗಿ ಹೊರಗೆ ಆಗಮಿಸಿದರು.

* 6.40 ಗಂಟೆಗೆ ಪ್ರವಾಸ ತಂಡದ ವಾಹನಗಳನ್ನು ರೈಲಿನಲ್ಲಿ ಇರಿಸಲಾಯಿತು. ರೈಲು ತಮ್ಮ ಸರಿಯಾದ ಸಮಯಕ್ಕೆ ಅಂದರೆ 6.50 ಗಂಟೆಗೆ Calais ನಿಂದ ಬ್ರಿಟಾನಿಯಾದ ಕಡಲ ನಗರವಾದ Dover ನತ್ತ ಹೊರಟಿತು. ಸುಮಾರು ಅರ್ಧ ಗಂಟೆಯ ಪ್ರಯಾಣದ ನಂತರ ರೈಲು ಚಾನಲ್ ಟನಲ್ ಪಾರು ಮಾಡಿ Dover ಸಮೀಪ ಬ್ರಿಟಾನಿಯಾ ಭೂಮಿಗೆ ಪ್ರವೇಶ ಮಾಡಿತು ಮತ್ತು ತನ್ನ ವಿಶಿಷ್ಠ ತಂಗುದಾಣದಲ್ಲಿ ನಿಂತಿತು. ಸುಮಾರು 10 ನಿಮಿಷ ವಿದಾಯದ ನಂತರ ಫ್ರಾನ್ಸ್‌ನ ವೇಳೆಯಂತೆ 7:30 ಗಂಟೆಗೆ ಮತ್ತು ಬ್ರಿಟಾನಿಯಾ ಸಮಯಾನುಸಾರ 6.30 ಗಂಟೆಗೆ ಪ್ರವಾಸ ತಂಡದ ವಾಹನಗಳು ರೈಲಿನಿಂದ ಹೊರಬಂದವು. Motor way ಪ್ರಯಾಣ ಪ್ರಾರಂಭವಾಯಿತು.

* ಮಾನ್ಯ ಅಮಿರ್ ಸಾಹಿಬ್ ಯು.ಕೆ, ಮಾನ್ಯ ಮುಬಲ್ಲಿಗ್ ಇನ್‌ಚಾರ್ಜ್ ಸಾಹಿಬ್, ಯು.ಕೆ ತನ್ನ ರಕ್ಷಣಾ ತಂಡ ಮತ್ತು ಜಮಾಅತಿನ ಇತರ ಅಧಿಕಾರಿಗಳು ಹುಝೂರರಿಗೆ ಬರಮಾಡಿಕೊಳ್ಳಲು ಉಪಸ್ಥಿತರಿದ್ದರು.

ಸುಮಾರು ಒಂದೂವರೆ ಗಂಟೆಯ ನಂತರ ಸಂಜೆ 8 ಗಂಟೆಗೆ ಮಸ್ಜಿದ್ ಫಝುಲ್ ಲಂಡನ್ ತಲುಪಿದರು. ಅಲ್ಲಿ ಜಮಾಅತ್ ಬಾಂಧವರು ಸ್ತ್ರೀ ಪುರುಷರು ಒಂದು ದೊಡ್ಡ ಸಂಖ್ಯೆ ತನ್ನ ಪ್ರೀತಿಯ ಇಮಾಮರಿಗೆ ಅಹಲಾಂ ವ ಸಹಲಾಂ ವ ಮರ್‌ಹಬಾ ಹೇಳಿದರು.

ಹುಝೂರೆ ಅನ್ವರ್(ಅತಬಿಅ) ಪ್ರೀತಿಪೂರ್ವಕವಾಗಿ ತನ್ನ ಕೈಯನ್ನು ಬೀಸುತ್ತ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿದರು. ಮತ್ತು ತನ್ನ ವಸತಿ ನಿಲಯಕ್ಕೆ ತೆರಳಿದರು.

ಅದೇ ರೀತಿ ಹುಝೂರೆ ಅನ್ವರ್ ರವರ ಈ ಅತ್ಯಂತ ಅನುಗ್ರಹಿತ ಪ್ರವಾಸ ತನ್ನ ಅಪರಿಮಿತ ಔದಾರ್ಯಗಳನ್ನು ಹಾಗೂ ಕಾರುಣ್ಯಗಳನ್ನು ಆನಂಧಿಸುತ್ತ ಕ್ಷೆಮವಾಗಿ ಬಂದು ತಲುಪಿದರು. ಅಲ್‌ಹಮ್ದುಲಿಲ್ಲಾಹ್ ಅಲಾ ಝಾಲಿಕ್. (ಅಖ್ಬಾರೆ ಬದರ್ ಉರ್ದು 10 ಸೆಪ್ಟೆಂಬರ್ 2015)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.